

# ಪೀಠಿಕೆ

ಕ್ರಿಸ್ತನೊಟ್ಟಿಗೆ ನನ್ನ ಸಂಬಂಧವು 1956ನೇ ಇಸ್ವಿ ಸೆಪ್ಟೆಂಬರ್‌ನಲ್ಲಿ ಪ್ರಾರಂಭವಾಯಿತು. ಆಗ ನಾನು 20 ವರ್ಷ ವಯಸ್ಸಿನವನಾಗಿದ್ದೆ. ನಾನು ನನ್ನ ಹೃದಯ ಪೂರ್ವಕವಾಗಿ ಮತ್ತು ನನ್ನ ಜೀವಿತವನ್ನು ಕ್ರಿಸ್ತನೇ ನನ್ನ ರಕ್ಷಕನೆಂದು ಒಪ್ಪಿಕೊಂಡೆನು ಮತ್ತು ಆಶ್ಚರ್ಯಕರವಾದ ಬದಲಾವಣೆ ನನ್ನಲ್ಲಿ ಆಯಿತು. ಇದು ನನಗೆ ಅತ್ಯಂತ ಹೆಮ್ಮೆಯ ಗೌರವದ ಸಂಗತಿಯಾಯಿತು ಮತ್ತು ಅಲ್ಲಿಂದ ನಾನು ನಂಬಿಕೆಯಿಂದ ಆತನನ್ನು ಪ್ರೀತಿಸತೊಡಗಿದೆ ಮತ್ತು ಆತನನ್ನು ಸೇವೆ ಮಾಡಲು ಪ್ರಾರಂಭಿಸಿದೆ ಮತ್ತು ಆತನ ಪ್ರೀತಿಯನ್ನು ಅನೇಕ ಜನರಿಗೆ ಭೋದಿಸುವುದರ ಮೂಲಕ ಮತ್ತು ಕಲಿಸುವುದರ ಮೂಲಕ, ಆತನಲ್ಲಿ ಬೆಳೆಯುತ್ತಾ ಆತನೊಟ್ಟಿಗೆ ನಡೆಯಲು ಪ್ರಾರಂಭಿಸಿದನು.

ಆದರೂ, ಈ ನನ್ನ ಜೀವಿತದ ಅನೇಕ ವರ್ಷಗಳಲ್ಲಿ, ನಾನು ಲಕ್ಷಾಂತರ ಪ್ರಕರಣಗಳನ್ನು ನೋಡಿದ್ದೇನೆ, ಅವುಗಳಲ್ಲಿ ಕೆಲವು ಸರಳವಾಗಿರುವವು. ಅನುಸರಿಸಲು ಸರಳವಾಗಿರುವಂತವು ಮತ್ತು ಶಿಷ್ಯರಾಗಿ ನಡೆಯುವ ಸಂಗತಿ, ಪರಿಣಾಮವಾಗಿ ನಾನು ಕ್ರಿಸ್ತನನ್ನು ಕೇಂದ್ರಿಕೃತವಾಗಿ, ಸತ್ಯವೇದದ ಆಧಾರವಾಗಿರುವುದು, ಪ್ರಾಯೋಗಿಕವಾಗಿರುವ ಸಂಗತಿಗಳನ್ನು ನಾನು ಮತ್ತು ಇತರರು ಬಹಳ ವರ್ಷಗಳಿಂದ ಯಶಸ್ವಿಯಾಗಿ ಅನುಸರಿಸಿಕೊಂಡು ಬರುತ್ತಿದ್ದೇವೆ.

ಹಲವಾರು ಅತ್ಯುತ್ತಮ ಪುಸ್ತಕಗಳು ಮತ್ತು ಸಂಗತಿಗಳನ್ನು ಅನೇಕ ದೊಡ್ಡ ವಿಷಯಗಳನ್ನು ಕುರಿತು ಬರೆಯಲಾಗಿದೆ. ನಾನು ಆ ಪುಸ್ತಕಗಳನ್ನು ಆಧಾರವಾಗಿಟ್ಟುಕೊಂಡು ಮುಖ್ಯಾಂಶಗಳನ್ನು ಕ್ರೋಡೀಕರಿಸಿ ಬರೆದಿದ್ದೇನೆ. ಆದ್ದರಿಂದ ಇದು ಅರ್ಥಮಾಡಿಕೊಳ್ಳಲು ಮತ್ತು ಬಹಳ ಸರಳವಾಗಿದೆ.

ನಾನು ಈ ಪುಸ್ತಕವನ್ನು ಪವರ್ ಪ್ಯಾಕ್ (ಶಕ್ತಿಯುತವಾದ) ಎಂದು ಕರೆಯುತ್ತೇನೆ. ಇದು ನಿಮಗೆ ಕ್ರಿಸ್ತನ ಮಹಾಕಾರ್ಯವನ್ನು ಅರ್ಥಮಾಡಿಕೊಳ್ಳುವ ಸಾಧನವಾಗಿದೆ. ಅದೇನೆಂದರೆ - "... ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ಜನರನ್ನು ಶಿಷ್ಯರನ್ನಾಗಿ ಮಾಡಿರಿ... ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶ ಮಾಡಿರಿ." (ಮತ್ತಾ 28:19-20).

ನಮ್ಮ ಮಹಾರಕ್ಷಕನು ನಿಮಗೆ ಆಶೀರ್ವಾದ ಮಾಡಲಿ ಮತ್ತು ನೀವು ಆತನ ಮಹಿಮೆಯನ್ನು ಹೊಂದಿ, ಗೆಲ್ಲಲು, ಕಟ್ಟಲು, ಮತ್ತು ಬೇರೆಯವರನ್ನು ಕ್ರಿಸ್ತನಿಗಾಗಿ ಕಳುಹಿಸಲು ಸಹಕಾರಿಯಾಗಲಿ.

**ಪವರ್ ಪ್ಯಾಕ್‌ನ ಇನ್ನು ಹೆಚ್ಚಿನ ಪ್ರತಿಗಳನ್ನು ಹೇಗೆ ಪಡೆಯಬಹುದು:-**

1. ನೀವು ಹೆಚ್ಚುವರಿ ಪ್ರತಿಗಳನ್ನು ಕೆಳಗಿನವ ವಿಳಾಸದಲ್ಲಿ ಪಡೆಯಬಹುದು. ಆದರೆ ಈ ಪುಸ್ತಕದ ವಿಷಯಗಳನ್ನು ಬದಲಾವಣೆ ಮಾಡಬೇಡಿ.

2. ನಿಮ್ಮ ಸ್ವಂತ ಪ್ರತಿಗಳನ್ನು ಜೆರಾಕ್ಸ್ ಮೂಲಕ ಹೆಚ್ಚಿಗೆ ಮಾಡಿಕೊಳ್ಳಬಹುದು, ಇಡೀ ಪುಸ್ತಕವನ್ನು ಅಥವಾ ಅದರ ಒಂದು ಭಾಗವನ್ನು ಕೂಡ ನೀವು ಜೆರಾಕ್ಸ್ ಮಾಡಿಕೊಳ್ಳಬಹುದು.

3. ಕೆಳಗೆ ಕೊಟ್ಟಿರುವ ವೆಬ್‌ಸೈಟ್‌ನಲ್ಲಿ ನೀವು ಅಧಿಕ ಪ್ರತಿಗಳನ್ನು ಡೌನ್ ಲೋಡ್ ಮಾಡಿಕೊಳ್ಳಬಹುದು.


**ಹೆಚ್ಚಿನ ಪ್ರತಿಗಳಿಗೆ ದಯವಿಟ್ಟು ಸಂಪರ್ಕಿಸಿ:-**

**ವೆಯಿನ್ ಶೌರ್ಟ್, 3017, E, ಸ್ಟೆಲ್ಲಾಲೇನ್, ಫೋಯೆನಿಕ್ಸ್, AZ85016**

# ಅನುಕ್ರಮಣಿಕೆ


ಪವಿತ್ರಾತ್ಮ.........................................................................1

ಕ್ರಿಸ್ತನಿಗಾಗಿ ಸಾಕ್ಷಿ ಕೊಡುವುದು ..................................................2

ಯಶಸ್ವಿ ಸಾಕ್ಷಿಕೊಡುವುದು ..........................................................3

ನೀವು ಹೇಗೆ ತಯಾರಾಗಬೇಕು ಮತ್ತು ನಮ್ಮ ಒಡಂಬಡಿಕೆಯ ಪ್ರಮಾಣವನ್ನು ಹೇಗೆ ತೋರಿಸಬೇಕು. .....................................................................4

ಸಾಕ್ಷಿ ಅಥವಾ ಒಡಂಬಡಿಕೆಯನ್ನು ತೋರಿಸುವಹಾಳೆ .............................5

ಗುರಿ ...........................................................................................6

ಕ್ರೈಸ್ತ ಧರ್ಮದ ಸಂಕ್ರಮಣ ................................................... 7-8


ಶಿಷ್ಯರಾಗುವುದು .............................................................9-10

ಆತ್ಮೀಕ ಬೆಳವಣಿಗೆಯ ನಾಲ್ಕು ವಿಚಾರ (ವಿಷಯ)ಗಳು ........................ 11

ದೇವರ ವಾಕ್ಯವನ್ನು ಪರಿಣಾಮಕಾರಿಯಾಗಿ ಭೋದಿಸುವುದು ಹೇಗೆ? .......... 12

ಸಣ್ಣ ಗುಂಪಿಗೆ ತರಬೇತಿ ....................................................... 13

ನಿಮ್ಮ ಸತ್ಯವೇದವನ್ನು ಅಧ್ಯಯನ ಮಾಡುವುದು ಹೇಗೆ .................. 14-15



# ಪವಿತ್ರಾತ್ಮ

ಕ್ರೈಸ್ತರಿಗೆ ಪವಿತ್ರಾತ್ಮನ ಬಗ್ಗೆ ತಿಳಿಯುವ ಮತ್ತು ಅಧ್ಯಯನ ಮಾಡುವ ವಿಷಯಕ್ಕಿಂತ ದೊಡ್ಡದಾದ ತ್ತು ಮಹತ್ವವಾದ ಸಂಗತಿ ಬೇರೊಂದಿಲ್ಲ. ನಾಮ ಆತನ ಕಾರ್ಯ ಮತ್ತು ಶಕ್ತಿಯನ್ನು ನಮ್ಮ ಜೀವಿತದಲ್ಲಿ ಅನುಭವಿಸಬಹುದಾಗಿದೆ. ನಾವು ಆತನ ಶಕ್ತಿಯನ್ನು  ಹೊಂದಿದ್ದರೆ, ಕ್ರಿಸ್ತನ ಪ್ರೀತಿಯನ್ನು ನಾವು ಪ್ರತಿಫಲಿಸುವವರಾಗುತ್ತೇವೆ ಮತ್ತು ಬೇರೆಯವರು ಸಹ ನಮ್ಮ ಮಹಾಯೋಜನೆಗೆ ಸೇರಲು ಸಹಕಾರಿಯಾಗುತ್ತದೆ.

1. ಆತನು ಯಾರು? ಆತನು ದೇವರು. ದೈವತ್ವದ ಮೂರನೇ ವ್ಯಕ್ತಿಯಾಗಿದ್ದಾನೆ. (ಮತ್ತಾಯ 28:19-20)
2. ಆತ ವ್ಯಕ್ತಿಯಾಗಿದ್ದಾನೆ. (ಯೋಹಾನ 16:13)
3. ಆತ ಲೋಕಕ್ಕೆ (ಆತನನ್ನು ನಂಬದವರಿಗೆ) ಶಿಕ್ಷೆ ವಿಧಿಸುತ್ತಾನೆ, ಪಾಪಿಷ್ಠರಿಗೆ ಮತ್ತು ನೀತಿವಂತರಿಗೆ ನ್ಯಾಯ ತೀರ್ಪಿಕೆ ಮಾಡುವವನಾಗಿದ್ದಾನೆ. (ಯೋಹಾನ16:8)
4. ಆತ ಯೇಸುವಿನ ಬಗ್ಗೆ ಸಾಕ್ಷಿಕೊಡುತ್ತಾನೆ. (ಮಾತಾಡುತ್ತಾನೆ) (ಯೋಹಾನ 15:26).
5. ಆತ ಎಲ್ಲರಿಗೂ ಸತ್ಯಮಾರ್ಗದಲ್ಲಿ ನಡೆಯಲು ಮಾರ್ಗದರ್ಶಕ ಆಗಿದ್ದಾನೆ. (ಯೋಹಾನ 16:13).
6. ಆತ ಹೊಸದಾಗಿ ಹುಟ್ಟಿದವರಿಗೆ, ಹೊಸ ಜೀವಿತವನ್ನು ಕೊಡುವವನಾಗಿದ್ದಾನೆ. (ಯೋಹಾನ 3:5-6).
7. ಆತ ಕ್ರೈಸ್ತನಂಬಿಕೆ (ಕ್ರೈಸ್ತರ)ಯವರೆಲ್ಲರಲ್ಲಿ ವಾಸ ಮಾಡುವವನು ಆಗಿದ್ದಾನೆ.  (1 ಕೊರಿಂಥ 6:19-20).
8. ದೇವರ ಆತ್ಮೀಕ ವರಗಳ ಮೂಲ ಕರ್ತೃವಾಗಿದ್ದಾನೆ. (1 ಕೊರಿಂಥ 12:1-11, ರೋಮಾಪುರ 12:6-8).
9. ದೇವರ ಫಲಗಳ ಕರ್ತೃವಾಗಿದ್ದಾನೆ. (ಗುಣಲಕ್ಷಣಗಳು) (ಗಲಾ 5:22-23).
10. ನಾವು ಕ್ರಿಸ್ತನಿಗಾಗಿ ಸಾಕ್ಷಿಕೊಡುವಂತೆ ಶಕ್ತಿ ಕೊಡುವವನಾಗಿದ್ದಾನೆ. (ಅ.ಕೃ.1:8).
11. ನಾವು ಪವಿತ್ರಾತ್ಮಭರಿತರಾಗಿರಬೇಕು ಎಂದು ದೇವರು ಆಜ್ಞಾಪಿಸಿದ್ದಾನೆ. (ಎಫೆಸ 5:18).

# ಕ್ರಿಸ್ತನಿಗಾಗಿ ಸಾಕ್ಷಿ ಕೊಡುವುದು



ಈ ಕೆಳಗಿನ ಕೆಲವು ಸಲಹೆಗಳು ನಿಮಗೆ ಕರ್ತನಾದ ಯೇಸು ಕ್ರಿಸ್ತನ ಬಗ್ಗೆ ಧೃಡವಾಗಿ ಸಾಕ್ಷಿ ಕೊಡಲು ಸಹಕಾರಿ ಮತ್ತು ಹುರಿದುಂಬಿಸುವುಗಳು ಆಗಿವೆ. ನಾವು ನಮ್ಮ ಗುರಿಯನ್ನು ಗೆಲ್ಲಲು ಮತ್ತು ಬೇರೆಯವರು ಸಾಕ್ಷಿಕರಿಸಲು ಸಹಕಾರಿಯಾಗಿವೆ.

1. ಮೊದಲನೆಯದಾಗಿ, ನಾವು ನಮ್ಮ ರಕ್ಷಣೆಯ ಬಗ್ಗೆ ದೃಢವಾಗಿರಬೇಕು. ನಿಮಗೆ ನಿತ್ಯಜೀವವನ್ನು ದೇವರು ಕೊಡುತ್ತಾನೆ ಎಂಬುದು ನಮಗೆ ತಿಳಿಯಬೇಕು ಎಂದು ದೇವರು ಆಶಿಸುತ್ತಾನೆ. (1 ಯೋಹಾನ 5:13).
2. ಅತ್ಯಂತ ಮುಖ್ಯವಾಗಿ ಮತ್ತು ಪರಿಣಾಮಕಾರಿಯಾದ ವಿಷಯವೆಂದರೆ :- ನೀವು ನಿಮ್ಮನ್ನು ಸಂಪೂರ್ಣವಾಗಿ ಕ್ರಿಸ್ತನಿಗೆ ಅಧೀನಮಾಡಿಕೊಳ್ಳಿ ಮತ್ತು ಪವಿತ್ರಾತ್ಮಭರಿತರಾಗಿ ಮತ್ತು ಆತನ ಶಕ್ತಿಯನ್ನು ಹೊಂದಿರಿ. ಪವಿತ್ರಾತ್ಮನನ್ನು ಹೊಂದುವುದು ಯೇಸುಕ್ರಿಸ್ತನಿಗೆ ಸಾಕ್ಷಿ ಕೊಡುವುದೇ ಆಗಿದೆ. (ಅಪೋಸ್ತಲರ ಕೃತ್ಯಗಳು 1:8, 4:31, 9:17,20).
3. "ದೃಢವಾದ ಮತ್ತು ಪರಿಣಾಮಕಾರಿಯಾದ" ಸಾಕ್ಷಿ ಕೊಡಲು ಕಲಿತುಕೊಳ್ಳಿ ಮತ್ತು ಅದನ್ನು ನಿಮ್ಮ ಜೀವಿತದಲ್ಲಿ ಅಳವಡಿಸಿಕೊಳ್ಳಿ. ಹೇಗೆಂದರೆ ಯೇಸು ಕ್ರಿಸ್ತನಲ್ಲಿ ಪಾಲುಗಾರರಾಗುವುದು ಮತ್ತು ಪವಿತ್ರಾತ್ಮನನ್ನು ಧರಿಸಿಕೊಳ್ಳುವುದು.
4. ದೇವರ ವಾಕ್ಯಗಳ ಬಗ್ಗೆ ಅಧ್ಯಯನ ಮಾಡಿ ನಿಮ್ಮ ಕಾರ್ಯಗಳ ಜ್ಞಾನವನ್ನು ಹೆಚ್ಚಿಸಿಕೊಳ್ಳಿ. ನೀವು ದೇವರ ವಾಕ್ಯವನ್ನು ನಿಮ್ಮ ಹೃದಯಗಳಲ್ಲಿ ಭದ್ರವಾಗಿ ಹಿಡಿದಿಟ್ಟುಕೊಳ್ಳಿ. ಇದರಿಂದ ಪವಿತ್ರಾತ್ಮನು ನಿಮ್ಮ ಮೂಲಕ ಬೇರೆಯವರನ್ನು ಕ್ರಿಸ್ತನಲ್ಲಿಗೆ ತರಲು ಸಹಕಾರಿಯಾಗುತ್ತದೆ. (2 ತಿಮೋಥಿ 2:15).
5. ದೇವರ ವಾಕ್ಯವನ್ನು ಅಧ್ಯಯನಮಾಡಿ ಶಾರೀರಿಕ ಲಕ್ಷಣಗಳಿಂದ ಆತ್ಮೀಕದೆಡೆಗೆ ಸೇರಬೇಕು. ನಾವು ವೈಯಕ್ತಿಕವಾಗಿ ದೇವರಿಗೆ ಶರಣಾಗಬೇಕು, ಕ್ರಿಸ್ತನನ್ನು ಅಂಗೀಕರಿಸಬೇಕು. ಸತ್ಯವೇದಕ್ಕೆ ಸಂಬಂಧಿಸಿದ ಕಿರುಹೊತ್ತಿಗೆಗಳನ್ನು ಉಪಯೋಗಿಸುವುದು ತುಂಬಾ ಅನುಕೂಲಕರವಾಗಿರುತ್ತದೆ. ಅಂತಹ ಪುಸ್ತಕವೆಂದರೆ - "ನಿಮಗೆ ವೈಯಕ್ತಿಕವಾಗಿ ದೇವರ ಗುಣಲಕ್ಷಣಗಳನ್ನು ಅರಿಯುವ ಇಚ್ಛೆಯಿದೆಯೇ?"
6. ಕ್ರಿಸ್ತನ ಮೂಲಕ ವಿಮೋಚನೆಯನ್ನು ಹೊಂದಲು ಕೆಳಗಿನ ಸರಳವಾದ ನೀಲ ನಕ್ಷೆಯನ್ನು ಅನುಸರಿಸಿ.
   ಎ) ದೇವರು ನಿಮ್ಮನ್ನು ಪ್ರೀತಿಸುವವನಾಗಿದ್ದಾನೆ ಮತ್ತು ಆತನನ್ನು ನಾವು ತಿಳಿಯಬೇಕೆಂದು ಸೃಷ್ಟಿಸಿದ್ದಾನೆ.
   ಬಿ) ಮಾನವರು ಪಾಪಿಗಳಾಗಿರುವುದರಿಂದ ದೇವರಿಂದ ದೂರವಾಗಿದ್ದಾರೆ. ಆದ್ದರಿಂದ ದೇವರನ್ನು ವೈಯಕ್ತಿಕವಾಗಿ ತಿಳಿಯಲು ಸಾಧ್ಯವಾಗಿಲ್ಲ ಮತ್ತು ಆತನ ಪ್ರೀತಿಯನ್ನು ಅನುಭವಿಸಲು ಸಾಧ್ಯವಾಗಿಲ್ಲ. (ರೋಮಾಪುರದವರಿಗೆ 3:23, 6:23)
   ಸಿ) ಮಾನವನ ಪಾಪಪರಿಹಾರ ಯೇಸು ಕ್ರಿಸ್ತನ ಮೂಲಕ ಮಾತ್ರ ಸಾಧ್ಯ, ಆದ್ದರಿಂದ ನಾವು ನೇರವಾಗಿ ತಿಳಿಯಲು ಮತ್ತು ಆತನ ಪ್ರೀತಿಯನ್ನು ಅನುಬವಿಸಲು ಸಾಧ್ಯವಾಗಿಲ್ಲ.
   ಡಿ) ನಾವುಗಳು ವೈಯಕ್ತಿಕವಾಗಿ ಯೇಸುಕ್ರಿಸ್ತನು ನಮ್ಮ ಕರ್ತನು ಎಂದು ಒಪ್ಪಿಕೊಳ್ಳಬೇಕು (ಅಂಗೀಕರಿಸಬೇಕು). ಈ ಮೂಲಕ ನಾವು ದೇವರನ್ನು ತಿಳಿಯಬಹುದು ಮತ್ತು ದೇವರ ಪ್ರೀತಿಯನ್ನು ಹೊಂದಿ ಅನುಭವಿಸಬಹುದು.
7. ಯೇಸು ಕ್ರಿಸ್ತನಿಗೆ ಸಂಬಂಧಿಸಿದ ವಿಡಿಯೋವನ್ನು ಕ್ರೈಸ್ತರಲ್ಲದವರಿಗೆ ವೀಕ್ಷಿಸಲು ಅನುವು ಮಾಡಿಕೊಡುವುದು ಅಥವಾ ಅವರನ್ನು ನಿಮ್ಮೊಡ್ಡಿಗೆ ವಿಡಿಯೋ ವೀಕ್ಷಿಸಲು ಆಹ್ವಾನ ನೀಡುವುದು.
8. ಯಾರಾದರು ವ್ಯಕ್ತಿ ಕ್ರಿಸ್ತನನ್ನು ಹೊಂದಲು ಸಮ್ಮತಿಸಿದರೆ, ಕೂಡಲೇ ಆತನಿಗೆ ಉತ್ತೇಜನ ನೀಡಬೇಕು ಮತ್ತು ಯೇಸುವಿನ ಕಾರ್ಯಗಳ ಬಗ್ಗೆ ತಿಳಿಸಬೇಕು. (ಲೂಕ 8:39) ಮತ್ತು ಅವರು ಸಭೆಗೆ ಸೇರುವುದಕ್ಕೆ ಅನುವು ಮಾಡಿಕೊಡಬೇಕು.
9. ನಿಮ್ಮ ಮಾತುಗಳು ಸ್ಪಷ್ಟವಾಗಿರಲಿ, ಯಾವಾಗಲೂ ದೇವರ ವಾಕ್ಯಗಳನ್ನು ಉಪಯೋಗಿಸಿ, ನಿಮ್ಮ ಸ್ವಂತ ಕಲ್ಪನೆಗಳಮೊನ್ನು ಮಾತಾಡಬೇಡಿ. ಯಾವಾಗಲೂ ಹಸನ್ಮುಖರಾಗಿರಿ, ಸ್ನೇಹಭಾವದಿಂದ ಮಾತನಾಡಿ.
10. ಬೇರೆಯವರಿಗೆ ಸಹಕಾರ ಮನೋಭಾವವಿರಲಿ ಮತ್ತು ಇತರರ ಅಗತ್ಯತೆಗಳನ್ನು ಅರಿತು ಸಹಕರಿಸುವವರಾಗಿರಿ.
11. ಎಲ್ಲಕ್ಕಿಂತ ಮಿಗಿಲಾಗಿ ಕ್ರಿಸ್ತನೇ ಮುಖ್ಯಸ್ಥ ಎಂಬ ವಿಷಯ ಕೇಂದ್ರಿಕೃತ ವಿಷಯವಾಗಿರಬೇಕು.
12. ಕೆಳಗಿನ ವಿಷಯಗಳನ್ನು ಮಾಡಬೇಡಿ.
   ಎ) ವಾದ ಮಾತು ಟೀಕೆಗಳು, ಕುತರ್ಕ.
   ಬಿ) ನನಗಿಂತ ಪರಿಶುದ್ಧರಿಲ್ಲ ಎಂಬ ಭಾವನೆ ಬೇಡ.
   ಸಿ) ಅತಿಯಾದ ಮಾತುಗಾರಿಕೆ, ಕೇವಲ ಅನಗತ್ಯವಾಗಿ ಮಾತನಾಡುತ್ತಾ, ಅವರ ಅವಶ್ಯಕತೆಗಳನ್ನು ತಿಳಿಯದಿರುವುದು, ಅಥವಾ ಗಮನಿಸದಿರುವುದು.
   ಡಿ) ಬಲವಂತ, ಬಲತ್ಕಾರ ಮಾಡಬೇಡಿ, ಗೌರವದಿಂದಿರಿ, ಕೇಳಿಕೊಳ್ಳಿ ಆದರೆ ಒತ್ತಾಯ ಮಾಡಬೇಡಿ. (2 ತಿಮೋಥೆ 2:23-25)
13. ಯೇಸುಕ್ರಿಸ್ತನನ್ನು ಸಾಕ್ಷಿಕರಿಸುವುದರಿಂದ ಅನೇಕ ಅನುಕೂಲತೆಗಳಿವೆ:-
   ಅವುಗಳಲ್ಲಿ ಬಹಳ ಮುಖ್ಯವಾದುದು ಯಾವುದೆಂದರೆ, ನಾವು ಆತನಿಗೆ ಮಹಿಮೆ ಸಲ್ಲಿಸಬಹುದು. ಇದು ನಾವು ಕ್ರಿಸ್ತನನ್ನು ತಲುಪಲು ಅನುಕೂಲ ಮಾಡುತ್ತದೆ; ಇದು ಎಲ್ಲಾ ರೀತಿಯ, ಎಲ್ಲಾ ಹಿನ್ನೆಲೆಯ ಜನರನ್ನು ತಲುಪಲು ಸಹಕರಿಸುತ್ತದೆ; ಇದು ಕ್ರಿಸ್ತೀಯ ಸೇವೆಗೆ ಅತ್ಯುತ್ತಮ ಅವಕಾಶಕಲ್ಪಿಸುತ್ತದೆ ಮತ್ತು ನಮ್ಮ ಆತ್ಮೀಕ ಜೀವನದಲ್ಲಿ ಆಳವಾಗಿ ಬೇರೂರಲು ಸಹಕಾರಿಯಾಗುತ್ತದೆ.

# ಯಶಸ್ವಿಯಾಗಿ ಸಾಕ್ಷಿ ಕೊಡುವುದು ಎಂದರೆ

"ಯೇಸುಕ್ರಿಸ್ತನೊಂದಿಗೆ,

ಪವಿತ್ರಾತ್ಮನ ಶಕ್ತಿಯ ಮೂಲಕ,

ಪಾಲುಗಾರರಾಗುವುದು

ಮತ್ತು ಅದರ ಪ್ರತಿಫಲವಾಗಿ

ದೇವರೊಟ್ಟಿಗೆ ಜೀವಿಸುವುದೇ

ಆಗಿದೆ."

# ನೀವು ಹೇಗೆ ತಯಾರಾಗಬೇಕು ಮತ್ತು ನಿಮ್ಮ ಒಡಂಬಡಿಕೆಯ ಪ್ರಮಾಣವನ್ನು ಹೇಗೆ ತೋರಿಸಬೇಕು.



ಈ ಕೆಳಗಿನ ಸಲಹೆಗಳು ನಿಮ್ಮ ಒಡಂಬಡಿಕೆಯ ಪ್ರಮಾಣವನ್ನು ತೋರಿಸಲು ಸಹಕಾರಿಯಾಗಿವೆ ಅಥವಾ ನಿಮ್ಮೊಟ್ಟಿಗೆ ಕ್ರಿಸ್ತನ ಸಂಬಂಧದ ಕಥೆಯಾಗಿವೆ. ಅವುಗಳು ಒಬ್ಬ ವ್ಯಕ್ತಿ ಅಥವಾ ಗುಂಪಿಗೆ ಸಂಬಂಧಿಸಿದೆ. ಜೊತೆಗೆ ಈ ಕೆಳಗಿನ ಸಲಹೆಗಳನ್ನು ಅನುಸರಿಸುವುದರ ಮೂಲಕ ನೀವು ಪರಿಣಾಮಕಾರಿಯಾಗಿ ಯೇಸು ಕ್ರಿಸ್ತನ ಕಾರ್ಯವನ್ನು ಪ್ರತಿಫಲಿಸಬಹುದು.

1. ನಿಮ್ಮನ್ನು ಶಕ್ತಿಗೊಳಿಸಲು, ಯೇಸುಕ್ರಿಸ್ತನು ವಿಷಯವನ್ನು ಮಾತನಾಡಲು ಮತ್ತು ಮಹಿಮೆ ಪಡಿಸಲು ಪವಿತ್ರಾತ್ಮನನ್ನು ಬೇಡಿಕೊಳ್ಳಿರಿ. (ಅ.ಕೃ.1:8).
2. ಈ ಕೆಳಗಿನ ಕೆಲವು ಸರಳವಾದ ಮುಖ್ಯಾಂಶಗಳ ಮೂಲಕ ನಿಮ್ಮ ರಕ್ಷಣೆಗೆ ಮಾರ್ಗವನ್ನು ಸಿದ್ದಪಡಿಸಿಕೊಳ್ಳಬಹುದಾಗಿದೆ:-
   ಎ) ಕ್ರಿಸ್ತನನನ್ನು ಅಂಗೀಕರಿಸುವ ಮುನ್ನ ನಿಮ್ಮ ಜೀವಿತ ಹೇಗಿತ್ತು.
   ಬಿ) ಕ್ರಿಸ್ತನನ್ನು ಹೇಗೆ ಅಂಗೀಕರಿಸಿದಿರಿ.
   ಸಿ) ಕ್ರಿಸ್ತನನ್ನು ಅಂಗೀಕರಿಸಿದ ಮೇಲೆ ನಿಮ್ಮ ಜೀವಿತ ಹೇಗಿರಬೇಕು. (ಅ.ಕೃ.26:1-23,ಅ.ಕೃ 22:1-21). ಈ ಮೇಲಿನ ಮುಖ್ಯಾಂಶಗಳು ನಿಮಗೆ ಹೊಸದಾಗಿ ಜೀವಿತವನ್ನು ಪ್ರಾರಂಭಿಸಲು, ಅದರಂತೆ ನಡೆಯಲು ಮತ್ತು ಮುಕ್ತಾಯಗೊಳಿಸಲು ಸಹಕಾರಿಯಾಗಿವೆ.
3. ಯೇಸು ಎಲ್ಲಕ್ಕಿಂತ ಮಿಗಿಲಾದವನು, ಸರ್ವಶ್ರೇಷ್ಠವಾದವನು ಎಂಬುದು ನಮ್ಮ ಮೊದಲ ಆದ್ಯತೆಯಾಗಿರಬೇಕು. ಆತನನ್ನು ಅಂಗೀಕರಿಸುವುದರ ಮೂಲಕ ರಕ್ಷಣೆ ಉಂಟಾಗುತ್ತದೆ (ಬರುತ್ತದೆ). ಈ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡು, ಕ್ರೈಸ್ತರಲ್ಲದ ಜನರಿಗೂ (ವ್ಯಕ್ತಿಗಳಿಗೆ) ಈ ವಿಷಯವನ್ನು ಅರ್ಥಮಾಡಿಸುವವರಾಗಿ, ಅವರು ಕೂಡ ನಿಮ್ಮ ನಂಬಿಕೆಯ ಮೂಲಕ ಕ್ರಿಸ್ತನನ್ನು ಅಂಗೀಕರಿಸುವಂತೆ ಮಾಡಬೇಕು. (ಲೂಕ 8:38-39).
4. ನೀವು ನಿಮ್ಮ ಸಾಕ್ಷಿಯನ್ನು ಬೇರೆಯವರಿಗೆ ತಿಳಿಸುವ ಸಮಯ 4 ರಿಂದ 5 ನಿಮಿಷಗಳಷ್ಟಿರಲಿ. 4 ರಿಂದ5 ನಿಮಿಷಗಳ ತಯಾರಿಯಿಂದ ನಿಮ್ಮ ಅನುಭವಗಳನ್ನು ವರ್ಣಿಸುವುದರ ಮೂಲಕ, ರೂಪಕಗಳ ಮೂಲಕ ಬೇರೆಯವರಿಗೆ ತಿಳಿಸಿಕೊಡಿ.
5. ನೀವು ಸಾಕ್ಷಿಕೊಡುವುದು, ಕ್ರಿಸ್ತನು ಹೇಗೆ ನಿಮ್ಮೊಳಗೆ ಕೆಲಸವನ್ನು ನಡೆಸಿದ್ದಾನೆ ಎಂಬುದನ್ನು ಇನ್ನೊಬ್ಬರೊಂದಿಗೆ ಹಂಚಿಕೊಳ್ಳುವುದೇ ಆಗಿದೆ. ಈ ಕಾರ್ಯವು ನಾವು ಬೇರೆಯವರೊಂದಿಗೆ ನಿಮ್ಮ ವಿಷಯವನ್ನು ಹಂಚಿಕೊಳ್ಳುವ ಒಂದು ಸುವರ್ಣವಕಾಶವನ್ನು ಒದಗಿಸಿಕೊಡುತ್ತದೆ: ಮತ್ತು ಕ್ರಿಸ್ತನ ವಿಷಯವನ್ನು ತಿಳಿಸಲು ಸಹಕಾರಿಯಾಗಿದೆ.
6. ನಿಮ್ಮ ಸಾಕ್ಷ್ಯವನ್ನು ಒಂದು ಅಥವಾ ಎರಡು ದೇವರ ವಾಕ್ಯಗಳ ಮೂಲಕ ಪುಷ್ಟೀಕರಿಸಿ. ನೀವು ಯಾವಾಗಲೂ ಸ್ಥಿರವಾಗಿದ್ದು ಒಳ್ಳೆಯ ಪ್ರಾರಂಭಮಾಡಿರಿ ಮತ್ತು ಒಳ್ಳೆಯ ಮುಕ್ತಾಯಮಾಡಿರಿ. ಈ ಕಾರ್ಯವು ಬೇರೆಯವರೊಟ್ಟಿಗೆ ವಿಷಯ ಹಂಚಿಕೊಳ್ಳಲು ತುಂಬಾ ಮುಖ್ಯವಾಗಿದೆ.
7. ಸ್ಪಷ್ಟವಾಗಿ, ಎತ್ತರದ ಧ್ವನಿಯಲ್ಲಿ ಎಲ್ಲರಿಗೂ ಕೇಳಿಸುವಂತೆ ಮಾತನಾಡಿ ಮತ್ತು ಎಲ್ಲರಿಗೂ ಈ ಮೂಲಕ ಕ್ರಿಸ್ತನ ಬಗ್ಗೆ ಉತ್ಸಾಹ ತುಂಬುವಂತೆ ಮಾಡಿರಿ.
8. ವಾಸ್ತವತೆಗೆ ಅನುಗುಣವಾಗಿರಿ, ಕ್ರಿಸ್ತನು ಗಲಿಬಿಲಿಗೂ, ಸಮಸ್ಯೆಗೂ ಕಾರಣನಲ್ಲ. ಆದರೆ ಆತನು ಸಮಸ್ಯೆಗಳನ್ನು ಹೊಂದಿರುವವರಿಗೆ ಪರಿಹಾರವನ್ನು, ಶಾಂತಿಯನ್ನು, ದೃಢತೆಯನ್ನು ಕೊಡುವವನಾಗಿದ್ದಾನೆ. (ಯಾಕೊ 1:2, ರೋಮಾ 5:3-4)
9. ಈ ಕೆಳಗಿನ ಅಂಶಗಳಿಂದ ದೂರವಾಗಿರಿ:-
   ಎ) ನಿಮ್ಮ ಸಾಕ್ಷಿ ಅಸ್ವಾಭಿವಿಕವಾಗಿರಬಾರದು, ಸ್ವಾಭಾವಿಕವಾಗಿರಲಿ, ಜನರು ಹೀಗೆ ಮಾಡಬೇಕು ಎಂದು ಒತ್ತಾಯ ಮಾಡಬೇಡಿರಿ.
   ಬಿ) ಧಾರ್ಮಿಕ, ಚರ್ಚುಗಳ ಅಥವಾ ಬೇರೆ ಬೇರೆ ಸಭೆಗಳ ವಿಷಯವನ್ನು ಟೀಕೆ ಮಾಡುವುದಾಗಲೀ, ಹೊಗಳುವುದಾಗಲೀ ಮಾಡಬೇಡಿ. ಯೇಸುವಿನ ಪ್ರಾಮುಖ್ಯತೆಯನ್ನು ಮಾತ್ರ ತಿಳಿಸಿ.
   ಸಿ) ಅಸ್ವಾಭಾವಿಕ, ಭಯಗೊಳ್ಳಬೇಡಿ ಶಾಂತಚಿತ್ತರಾಗಿರಿ.
   ಡಿ) ನಿಮ್ಮ ಬಲಹೀನತೆಯನ್ನು ಹೋಗಲಾಡಿಸಲು ಪ್ರಾರ್ಥಿಸಿರಿ, ಕ್ಷಮೆ ಕೇಳಿರಿ. ಇದರ ಮೂಲಕ ಬಲಗೊಳ್ಳಬಹುದು.
   ಈ) ಅರ್ಥವಾಗದ ಗಡಿಬಿಡಿ ಭಾಷೆ, ಅನಾಗರೀಕ ಭಾಷೆ ಉಪಯೋಗಿಸಬೇಡಿ.
10. ಅಂತಿಮವಾಗಿ, ನಿಮ್ಮ ಸಾಕ್ಷಿಯನ್ನು ಆಗಾಗ್ಗೆ ಜನರೊಂದಿಗೆ ಅಥವಾ ಗುಂದಿನೊಂದಿಗೆ ಹಂಚಿಕೊಳ್ಳಿ, ಈ ಕಾರ್ಯ ನಿಮ್ಮ ಕ್ರೈಸ್ತೀಯ ಜೀವಿತವನ್ನು ಉತ್ತೇಜನಗೊಳಿಸುತ್ತದೆ ಮತ್ತು ಬೇರೆಯವರು ಸಹ ಯೇಸುವನ್ನು ಅಂಗೀಕರಿಸಲು ಸಹಕಾರಿಯಾಗಿದೆ.

# ಸಾಕ್ಷಿಪ್ರಮಾಣ (ಒಡಂಬಡಿಕೆ) ತೋರಿಸುವ ಹಾಳೆ

1. ಕ್ರಿಸ್ತನನ್ನು ಅಂಗೀಕರಿಸುವ ಮೊದಲು ಹೇಗಿದ್ದೆ :

........................................

........................................

........................................

........................................

........................................

2. ಕ್ರಿಸ್ತನನ್ನು ಹೇಗೆ ಅಂಗೀಕರಿಸಿದೆ:

........................................

........................................

........................................

........................................

........................................

3. ಕ್ರಿಸ್ತನನ್ನು ನಾನು ಅಂಗೀಕರಿಸಿದ ಮೇಲೆ ದೇವರು ನನ್ನಲ್ಲಿ ಮಾಡಿದ ಬದಲಾವಣೆಗಳೇನು:

........................................

........................................

........................................

........................................

........................................

4. ಸಂಬಂಧಪಟ್ಟ ಸತ್ಯವೇದ ವಾಕ್ಯಗಳು:

........................................


........................................

........................................

........................................

........................................

# ಗುರಿ



1. ಯೇಸು ಹೇಳಿದ್ದು, “ಭೂಮಿಯ ಕೆಟ್ಟ ಕಡೆಯವರೆಗೂ ಹೋಗಿರಿ”.... (ಮಾರ್ಕ 16:15) ಮತ್ತು “ಹೋಗಿ ಶಿಷ್ಯರನ್ನಾಗಿ ಮಾಡಿರಿ”...... (ಮತ್ತಾಯ 28:19).

2. ಯಾವುದು ನನ್ನ “ಪ್ರಪಂಚ”?
   - ✦ ನನ್ನ ಮನೆ / ಕುಟುಂಬ
   - ✦ ನನ್ನ ನೆರೆ ಹೊರೆಯವರು
   - ✦ ನನ್ನ ಕಛೇರಿ / ಕೆಲಸ ಮಾಡುವ ಸ್ಥಳ
   - ✦ ನನ್ನ ಸ್ನೇಹಿತರು
   - ✦ ನನ್ನ ಶಾಲೆ
   - ✦ ನನ್ನ ಗಾಲ್ಫ್ / ಟೆನಿಸ್ ಕ್ಲಬ್
   - ✦ ನನ್ನ ಇಷ್ಟ ರೆಸ್ಟೋರೆಂಟ್
   - ✦ ನನ್ನ ವ್ಯಾಯಾಮಶಾಲೆ / ಆಡಿದ ಕ್ಲಬ್
   - ✦ ಸಾಧಾರಣವಾಗಿ ನಾನು ವಾಸಿಸುವ ಸ್ಥಳ
   - ✦ ಕೆಲಸಮಾಡುವ ಮತ್ತು ಆಟವಾಡುವ ಸ್ಥಳ

3. ನಾನು ಮೀನನ್ನು ಹಿಡಿಯಬೇಕಾದರೆ, ನಾನು ಮೀನು ದೊರಕುವ ಸ್ಥಳಕ್ಕೆ ಹೋಗಬೇಕು.
4. ನಾನು ಜನರನ್ನು ಹಿಡಿಯಬೇಕಾದರೆ, ನಾನು ಜನರು ಇರುವ ಸ್ಥಳಕ್ಕೆ ಹೋಗಲೇ ಬೇಕು.
5. ನಾನು ಜನರನ್ನು ಹಿಡಿಯಬೇಕಾದರೆ ಯಾವ ಮಾರ್ಗ ಅಥವಾ ಕಾರ್ಯಗಳ ಮೂಲಕ ಹೋಗಬೇಕು?
   - ✦ ಸ್ನೇಹತ್ವವನ್ನು ತೋರಿಸಬೇಕು
   - ✦ ಉಪಹಾರಕ್ಕೆ ಆಹ್ವಾಹಿಸಬೇಕು
   - ✦ ರಾತ್ರಿಬೋಜನ ಕೂಟಕ್ಕೆ ದಂಪತಿಗಳಿಗೆ ಆಹ್ವಾನ
   - ✦ ಆಟೋಟಗಳಲ್ಲಿ ಬಾಗಿಯಾಗುವುದು
   - ✦ ಯೇಸುವಿಗೆ ಸಂಬಂಧಿಸಿದ ಚಿತ್ರ / ವಿಡಿಯೋವನ್ನು ಅವರಿಗೆ ಎರವಲು ನೀಡುವುದು.
   - ✦ ವೈಯಕ್ತಿಕವಾಗಿ ಪತ್ರ ಬರೆಯಬೇಕು
   - ✦ ಕ್ರಿಸ್ತನಿಗೆ ಸಂಬಂಧಿಸಿದ ಕಾರ್ಯಗಳಿಗೆ ಆಹ್ವಾನ
   - ✦ ಅವರ ಮನೆ / ಕಛೇರಿಗಳಿಗೆ ಖುದ್ದಾಗಿ ಬೇಟಿ, ಆಸ್ಪತ್ರೆ / ಜೈಲುಗಳಿಗೆ ಬೇಟಿ.

6. ನೀವು ಕ್ರಿಸ್ತನ ಶಿಷ್ಯರಾಗಿ ಮಾಡಲು ಪ್ರಾರಂಭಿಸಿರುವ ಮೂರುಮಂದಿ ವ್ಯಕ್ತಿಗಳ ಹೆಸರನ್ನು ಬರೆಯಿರಿ:

   ಎ) ____________________________________

   ಬಿ) ____________________________________

   ಸಿ) ____________________________________

# ಕ್ರೈಸ್ತಧರ್ಮ ಬೋಧನೆಯ ಸಂಕ್ರಮಣ ಅಥವಾ ಹರಿಯುವಿಕೆ (ಬದಲಾವಣೆ)



1. ಇಂದಿನ ಕ್ರೈಸ್ತರು ಯೇಸುಕ್ರಿಸ್ತನನ್ನು ಬೇರೆಯವರೊಂದಿಗೆ ಹಂಚಿಕೊಳ್ಳಲು ಸಾಧ್ಯವಾಗದಿರಲು ಮುಖ್ಯ ಕಾರಣ, ಅವರಿಗೆ ತಮ್ಮ ಸಂಭಾಷಣೆಯ ವಿಷಯವನ್ನು ಹೇಗೆ ಪ್ರಾರಂಭಿಸಬೇಕು ಎಂದು ತಿಳಿಯದಿರುವುದೇ ಆಗಿದೆ.
2. ದೇವರ ವಾಕ್ಯ ನಮಗೆ ಸಿದ್ಧವಾಗಿರಬೇಕು ಎಂದು ತಿಳಿಸುತ್ತದೆ:
   1 ಪೇತ್ರ 3:15 - "ಯಾವಾಗಲೂ ಸಿದ್ಧವಾಗಿರಿ"
   2 ತಿಮೋ 4:2 - "ತಯಾರಾಗಿರು....."
   2 ತಿಮೋ 2:15 - "ಸರಿಯಾಗಿ ಉಪದೇಶಿಸು....."
3. ಸಂಕ್ರಮಣ (Transition) ಅಥವಾ ಬದಲಾವಣೆ ಎಂದರೆ ನಾವು ನಮ್ಮ ಶಾರೀರಿಕ ಲಕ್ಷಣಗಳಿಂದ ಆತೀಕ ಲಕ್ಷಣಕ್ಕೆ ಬದಲಾವಣೆಯಾಗುವುದೇ ಆಗಿದೆ.
4. ಎರಡು ರೀತಿಯ ಬದಲಾವಣೆಗಳಿವೆ:-
   ಎ) ಆತ್ಮೀಕ ಕಿವಿಗಳನ್ನು ತೆರೆದು ಬೇರೆಯವರು ಹೇಳುವಂತ ಮಾತುಗಳನ್ನು ಮತ್ತು ಪ್ರಶ್ನೆಗಳನ್ನು ಕೇಳಬೇಕು (ಆಲಿಸಬೇಕು).
   ಬಿ) ನಾವು ನಮ್ಮ ಸಂಭಾಷಣೆಯನ್ನು ಸಾರವಾಗಿಯೂ, ಸತ್ವಭರಿತವಾಗಿಯೂ, ಇರುವ ರೀತಿಯಲ್ಲಿ ನಡೆಸಬೇಕು. ಉದಾ:- ಯೋಹಾನ 4:7-10ರಲ್ಲಿ ಯೇಸು ಜೀವಕರವಾದ ನೀರುಎಂದು ತಿಳಿಸಿದ್ದಾನೆ. ಈ ರೀತಿಯಾಗಿ ಮಾತನಾಡಿದರೆ, ಬೇರೆಯವರು ಆಸಕ್ತಿಯಿಂದ ಕೇಳುತ್ತಾರೆ.
   ಸೂಚನೆ:- ಯಾವಾಗಲೂ ಸುವಾರ್ತೆಗೆ ಸಂಭಂಧಿಸಿದ ಕಿರುಹೊತ್ತಿಗೆಗಳು ನಿಮ್ಮ ಬಳಿ ಇರಲಿ, ಅವುಗಳನ್ನು ಬೇರೆಯವರಿಗೆ ಹಂಚಿ.
5. ಈ ಬದಲಾವಣೆಯ ವಿಷಯವಾಗಿ ನಡೆಯುವ ಸಂಭಾಷಣೆಯನ್ನು ಅಥವಾ ಕೆಲವರು ಕೇಳುವ ಪ್ರಶ್ನೆಗಳು ಹೇಗಿರುತ್ತವೆ ಮತ್ತು ನಿಮ್ಮ ಉತ್ತರ ಹೇಗಿರಬೇಕು ಎಂಬುದನ್ನು ದಪ್ಪ ಅಕ್ಷರಗಳಲ್ಲಿ ನೀಡಿದೆ.
   - ✦ ನೀವು ಹೇಗಿದ್ದೀರಿ? 92% ಆಶೀರ್ವಾದ ಹೊಂದಿದ್ದೇನೆ!
   - ✦ ನೀವು ಏನು ಕೆಲಸ ಮಾಡುತ್ತಿರುವಿರಿ? ನಾನು ದೂತ, ಮೀನು ಹಿಡಿಯುವ ಕೆಲಸ.
   - ✦ ಹೊಸದಾಗಿ ಏನಿದೆ? ಅನೇಕ ಒಳ್ಳೆಯ ಸಂಗತಿಗಳಿವೆ..... ಹೊಸದಾಗಿ ಹುಟ್ಟುವುದು..... ನಾನು ಹೊಸ ಜೀವಿತವನ್ನು ಹೊಂದಿರುವುದು.
   - ✦ ಮೇಲೆ ಏನಿದೆ? ಪರಲೋಕವಿದೆ ಮತ್ತು ಕೆಲವು ದಿವಸಗಳಲ್ಲಿ ನಾನು ಅಲ್ಲಿಗೆ ತೆರಳಲಿದ್ದೇನೆ.
   - ✦ ನೀವು ಯಾವಾಗಲೂ, ಸಂತೋಷದಾಯಕ, ಹಸನ್ಮುಖಿರಾಗಿ ಇರುತ್ತೀರಿ? ಹೌದು, ಏಕೆಂದರೆ ನನಗೆ ಬಂದು ರಹಸ್ಯ ತಿಳಿದಿದೆ. ಅದೇನೆಂದರೆ ಒಬ್ಬ ವಿಶೇಷ ವ್ಯಕ್ತಿಯ ಪರಿಚಯವಿದೆ.
   - ✦ ನಾನು ನನ್ನ ಸ್ನೇಹಿತರ ಧಾರ್ಮಿಕ ಕಾರ್ಯಕ್ಕೆ ಬಂದೆ. ಧಾರ್ಮಿಕ ಆಚರಣೆಗಳು ಸಾಕ್ಷಿಗೆ ತೊಂದರೆ ಕೊಡುತ್ತವೆ. ಇದೇ ರೀತಿಯ ಸಂಗತಿ ನಿಮ್ಮ ಜೀವನದಲ್ಲಿ ಮೊದಲು ಹಾಗಿತ್ತು.
   - ✦ ನಾನು ಮದುವೆಯಾಗಿ........ ವರ್ಷಗಳಾದವು. ಇದು ಒಳ್ಳೆಯ ಸಂಗತಿ. ಮದುವೆಯು ನಮ್ಮ ಜೀವಿತದ 2ನೇ ಪ್ರಮುಖ ಸಂಗತಿಯಾಗಿದೆ.
   - ✦ ನಮ್ಮ ಈ ಪ್ರಪಂಚವು ತುಂಬಾ ಕೆಟ್ಟದ್ದಾಗಿದೆ. (ಇತರೆ ಕೆಲ ವಿಷಯಗಳು). ಹೌದು, ಆದರೆ ಆದರೆ ಕೆಲವು ವರ್ಷಗಳ ಹಿಂದೆ ನನ್ನ ಜೀವಿತದಲ್ಲಿ ಒಂದು ಘಟನೆನಡೆದು, ಅದರ ಮೂಲಕ ನನ್ನ ಮುಂದಿನ ಜೀವಕ್ಕೆ ಭದ್ರತೆ ಸಿಕ್ಕಿದೆ.
   - ✦ ಈ ಕಾಲದಲ್ಲಿ ಉಚಿತವಾಗಿ ಏನೂ ಸಿಕ್ಕುವುದಿಲ್ಲ. ಹೌದು, ಆದರೆ ಈ ಲೋಕದಲ್ಲಿ ಅತ್ಯಂತ ಮಹತ್ವದಾರ ಉಡುಗೊರೆಯು ಉಚಿತವಾಗಿ ಸಿಕ್ಕುತ್ತದೆ. ಇದು ಸತ್ಯವೇದದ ರೋಮಾಪುರ ಪತ್ರಿಕೆ 6:23ರಲ್ಲಿದೆ.
   - ✦ ನಾನು ಮಹದಿನವನ್ನು ಹೊಂದಿದೆ. ಆಶ್ಚರ್ಯ, ಎಲ್ಲಾ ದಿನವೂ ಕೂಡ ಮಹಾದಿನವೇ ಆಗಿವೆ. ಏಕೆಕಂದರೆ ನಮಗೆ ವಿಶೇಷ ವ್ಯಕ್ತಿಯ ಬಗ್ಗೆ ತಿಳಿದಿದೆ.
   - ✦ ನಾನು ಬಹುಮಾನದ ಮಹಾ ಉಡುಗೊರೆ ದಿನ ಹೊಂದಿದೆ! ನಾನು ವಿಶೇಷ ವ್ಯಕ್ತಿಯ ಬಗ್ಗೆ ತಿಳಿದ ದಿನವೇ ಮಹಾಉಡುಗೊರೆಯ ದಿನವಾಗಿದೆ.
   - ✦ ಈ ನೀರು ಬಹಳ ಬಿಸಿಯಾದುದಾಗಿದೆ. ಆದರೆ ಅದು ನಮ್ಮನ್ನು ಪರಲೋಕಕ್ಕೆ ಕಳುಹಿಸಲು ಸಹಕಾರಿಯಾಗಿರುವುವ ವಿಷಯವೇ ಸಂತೋಷ ತರುವಂತಹುದಾಗಿದೆ.

6. ನಾನು ನನ್ನ ಸಂಭಾಷಣೆಯನ್ನು ಅಥವಾ ಪ್ರಶ್ನೆಯನ್ನು ರಸವತ್ತಾಗಿ ಪ್ರಾರಂಭಿಸುತ್ತೇನೆ.

- ನಾನು ನನ್ನ ಹೆಂಡತಿಯನ್ನು ಮದುವೆಯಾಗಲು ಕೇಳಿದ ವಿಷಯ ನನ್ನ ಜೀವನದ 2ನೇ ಪ್ರಮುಖವಾದ ಆಯ್ಕೆಯಾಗಿದೆ.
- ............ ವರ್ಷಗಳ ಹಿಂದೆ ನಾನು ಬಹಳ ಮುಖ್ಯವಾದ ಸಂಶೋದನೆ ಮಾಡಿ ಆಯ್ಕೆ ಮಾಡಿದೆ.
- ............ ವರ್ಷಗಳ ಹಿಂದೆ, ನನಗೆ ಮರಣದ ಬಗ್ಗೆ ಹೆದರಿಕೆಯಿತ್ತು, ಆದರೆ ಒಂದು ಆಶ್ಚರ್ಯಕರ ವಿಷಯ ತಿಳಿದ ಮೇಲೆ ನನ್ನ ಭಾವನೆ ಬದಲಾಯಿತು.
- ನನ್ನ ಜೀವಿತದಲ್ಲಿ ನಾನು ಸತ್ಯಹುಡುಕುವುದೇ ಮುಖ್ಯವಾದ ಕಾರ್ಯವಾಗಿದೆ.
- ನಿಮ್ಮ ಜೀವಿತದಲ್ಲಿ ಅತ್ಯಂತ ಮುಖ್ಯವಾದ ಸಂಗತಿ ಯಾವುದು?
- ನಿಮ್ಮ ಜೀವಿತದಲ್ಲಿ ಮೊದಲ ಗುರಿ ಯಾವುದು?
- ನಿಮ್ಮ ಮುಂದಿರುವ ಅತ್ಯಂತ ದೊಡ್ಡ ಸವಾಲು ಯಾವುದು?
- ನಿಮ್ಮ ಜೀವಿತದಲ್ಲಿ ನಡೆದಿರುವ ಮುಖ್ಯ ಘಟನೆ ಯಾವುದು?
- ನಿಮ್ಮ ಆತ್ಮೀಕ ಜೀವಿತದಲ್ಲಿ ಎಲ್ಲಿದ್ದೀರಿ?
- ನಾನು ನಿಮ್ಮೊಡನೆ ಒಳ್ಳೆಯ ಸಂಗತಿಯನ್ನು, ವಿಷಯವನ್ನು ಹಂಚಿಕೊಳ್ಳಬಹುದೇ?
- ಆತ್ಮೀಕ ನಿಯಮಗಳು ನಿಮಗೆ ಯಾವಾಗಲಾದರೂ ಕಠಿಣವೆನಿಸಿದೆಯೇ?
- ಕ್ರೈಸ್ತರು ಎಂದರೆ ಯಾರು? ನೀವು ಏನು ಹೇಳುವಿರಿ?
- ನಿಮ್ಮ ಅಭಿಪ್ರಾಯದಲ್ಲಿ ಒಬ್ಬರು ಹೇಗೆ ಕ್ರೈಸ್ತರಾಗಬಹುದು?
- ನಿಮಗೆ ವೈಯಕ್ತಿಕವಾಗಿ ದೇವರು ತಿಳಿದಿದ್ದಾರೆ, ಆತನೊಟ್ಟಿಗೆ ಹೇಗೆ ಸಂಬಂಧ ವಿವರಿಸಿಕೊಂಡಿರುವಿರಿ?
- ಯಾರಾದರು ನಿಮ್ಮನ್ನು, ದೇವರನ್ನು ಹೇಗೆ ತಿಳಿಯಬಹುದು? ಎಂಬ ಪ್ರಶ್ನೆ ಕೇಳಿದರೆ ಏನು ಉತ್ತರ ಕೊಡುವಿರಿ.
- ನಿಜವಾಗಿ ಪರಲೋಕ ಇರುವುದಾದರೆ, ನೀವು ಸತ್ತನಂತರ ಅಲ್ಲಿಗೆ ಹೋಗಲು ಇಚ್ಛಿಸುತ್ತೀರಾ? ಹೇಗೆ ಹೋಗಬಹುದು.
- ನೀವು ಈ ದಿನ ರಾತ್ರಿ ಮರಣಹೊಂದಿ, ದೇವರ ಮುಂದೆ ನಿಂತರೆ, ನೀವು ಪರಲೋಕಕ್ಕೆ ಏತಕ್ಕಾಗಿ ಬಂದಿರಿ? ಎಂಬ ಪ್ರಶ್ನೆಗೆ ಏನು ಉತ್ತರ ಕೊಡುವಿರಿ.
- ಒಂದು ಮಾನದಂಡದ ಪ್ರಕಾರ 1 ರಿಂದ 10 ಸ್ಥಾನ (100ಕ್ಕೆ 10 ಜನ ಮಾತ್ರ ಪರಿಪೂರ್ಣ)ವಿದ್ದಾರೆ ನೀವು ಯಾವ ಸ್ಥಾನದಲ್ಲಿ ಇರಲು ಇಷ್ಟಪಡುತ್ತೀರಿ.
- ನಿಮಗೆ, ಇಂದಿನ ಮಾನವರು ಆತ್ಮೀಕ ನಾಯಕತ್ವ ವಹಿಸಿದ್ದಾರೆ ಎಂದು ಅನಿಸುತ್ತಿದೆಯೇ?

# ಶಿಷ್ಯರಾಗುವುದು

ಯೇಸು ಹೇಳಿದ್ದೇನೆಂದರೆ "ಹೋಗಿರಿ ಮತ್ತು ಶಿಷ್ಯರನ್ನಾಗಿ (ಪ್ರಬುದ್ಧವಾದ ಶಿಷ್ಯರು ಮತ್ತು ಶಿಷ್ಯರು ಕ್ರಿಸ್ತನವರಾಗಿ) ಎಲ್ಲಾ ದೇಶಗಳವರನ್ನು ಮಾಡಿರಿ. ನಾನು ಕೊಟ್ಟ ಆಜ್ಞೆಗಳನ್ನೆಲ್ಲಾ ಅವರಿಗೆ ಬೋಧಿಸಿರಿ. (ಮತ್ತಾಯ 28:19-20)"

ಈ ಕೆಳಗಿನ ಸಲಹೆಗಳು ಯೇಸುವಿನ ಆಜ್ಞೆಗಳನ್ನು ಪಾಲಿಸಲು (ಅನುಸರಿಸಲು) ಸಹಕಾರಿಯಾಗಿವೆ.

1. ನಿಮ್ಮನ್ನು (ನಿಮ್ಮ ಕಾಲ, ಬುದ್ದಿಶಕ್ತಿ, ಸಮಯ ಮತ್ತು ಸಂಪತ್ತು ಎಲ್ಲವನ್ನು) ಕರ್ತನಿಗೆ ಅರ್ಪಿಸಿಕೊಳ್ಳಿ. (ಕೀಮಾಯ 12:1-2).
2. ದೇವರ ಪವಿತ್ರಶಕ್ತಿ ನಿಮ್ಮೊಳಗೆ ತುಂಬಿಕೊಳ್ಳಲು ಮತ್ತು ಕೆಲಸ ನಡೆಸಲು ಅವಕಾಶ ಮಾಡಿಕೊಡಿ. (ಅ.ಕೃ.1:8, ಎಫೆಸ 5:18).
3. ದೇವರ ವಾಕ್ಯಕ್ಕೆ ನಿಮ್ಮನ್ನು ತಯಾರಿ ಮಾಡಿಕೊಳ್ಳಿ. (2 ತಿಮೋಥಿ 2:15, 3:16-17).
4. ನೀವು ಗುಂಪಾಗಿ ಸೇರುವುದಕ್ಕಿಂತ ಮುಂಚಿತವಾಗಿ, ಅವರಿಗೆ ಬೇಟಿಯಾಗುವ ಸಮಯ ಮತ್ತು ಸ್ಥಳವನ್ನು ತಿಳಿಸಿ. ವಾರಕ್ಕೆ ಒಂದು ಬಾರಿ ಅರ್ಧ ಗಂಟೆ ಅಥವಾ 1 ಗಂಟೆ ಸೇರಿರಿ.
5. ನಿಮ್ಮ ಮೊಂದಲ ಬೇಟಿಯ ಸಮಯದಲ್ಲಿ ನಿಮ್ಮ ಗುರಿಯಲ್ಲಿ 2 ವಿಷಯಗಳು ಗಮನದಲ್ಲಿರಲಿ.

   ಈ ಕೆಳಗಿನ ವಾಕ್ಯಗಳು ನಿಮ್ಮ ನೆನಪಿನಲ್ಲಿರಲಿ.

   ಎ) ಆತ್ಮೀಕ ಬೆಳವಣಿಗೆ ಮತ್ತು ಪ್ರಬುದ್ಧವಾಗಿರಿ. (ಕೊಲೋ 2:6-7).

   ಬಿ) ಆತ್ಮೀಕವಾಗಿ ಹೆಚ್ಚುತ್ತಾ ಹೋಗುವುದು. (2 ತಿಮೋಥೆ 2:2).
6. ನಿಮ್ಮ ಸಹಬಾಗಿತ್ವ ಮತ್ತು ಚರ್ಚಿಯ ವಿಷಯಗಳಲ್ಲಿ ಯೇಸುಕ್ರಿಸ್ತನಿಗೆ ಮೊದಲ ಆದ್ಯತೆ ಮತ್ತು ಸರ್ವಾಧಿಪತ್ಯವನ್ನು ನೀಡಿ.
7. ಬೇರೆಯವರ ಜೀವನದಲ್ಲಿ, ಸಾಕಷ್ಟು ಸಹಕಾರದಿಂದ ಭಾಗಿಗಳಾಗಿ. (1 ಥೆಸ 2:7-12, ಕೊಲೊ 1:28-29)
8. ಯಾರು ಯೇಸುವಿನ ಶಿಷ್ಯರಾಗಲು ಬಂದಿರುತ್ತಾರೋ ಮತ್ತು ಬರುವವರೋ ಅವರೊಡನೆ ಉತ್ತಮವಾದ ಸ್ನೇಹ ಬೆಳಸಿಕೊಳ್ಳಿ. (ನೇರವಾಗಿ, ಫೋನ್ ಮುಖಾಂತರ ರಾತ್ರಿ ಭೋಜನ ಕೂಟಗಳಿಗೆ ಆಹ್ವಾನ ನೀಡುವುದು. ಸಹಬಾಗಿತ್ವ, ಆಟಗಳಲ್ಲಿ ಭಾಗವಹಿಸುವಿಕೆ.) ನಿಮ್ಮ ಅವರ ಸಂಬಂಧ ಬೇರೆ ವಿಷಯಕ್ಕಿಂತ ಬಹಳ ಮುಖ್ಯವಾಗಿದೆ ಎಂಬುದನ್ನು ನೆನಪಿನಲ್ಲಿಡಿ.
9. ಅವರಲ್ಲಿ ಹೊಸ ಒಡಂಬಡಿಕೆ ಅಥವ ಸತ್ಯವೇದ ಇದೆ ಎಂಬುದನ್ನು ಖಚಿತಪಡಿಸಿಕೊಳ್ಳಿ. ಅವರನ್ನು ಓದಲು ಪ್ರಕಟಿಸಲು ಉತ್ತೇಜಿಸಿ. ಯೋಹಾನನ ಸುವಾರ್ತೆಯನ್ನು (ಮೂರುಬಾರಿ) ಮತ್ತು ಇಡೀ ಹೊಸ ಒಡಂಬಡಿಕೆಯನ್ನು ಓದಲು ಉತ್ತೇಜಿಸಿ. (ಮೂರು ಬಾರಿ).
10. ಅವರನ್ನು 'ಲೈಫ್ ಬಿಲ್ಡರ್ಸ್ ಫೋರ್ ಪಾರ್ಟ್ ಫೌಂಡೇಶನ್' ಪಾಠಗಳನ್ನು ಮಾದರಿ ಮಾಡಿಕೊಂಡು ಜೀವಿಸುವಂತೆ ಅಥವ ಸತ್ಯವೇದವನ್ನು ಅಧ್ಯಯನಮಾಡಿಕೊಂಡು ಮಾದರಿ ಮಾಡಿಕೊಳ್ಳುವಂತೆ ತಿಳಿಸಿ.

11. ಆತ್ಮೀಕ ವಿಷಯಗಳನ್ನು ಪುನರ್ ಮನವ ಮಾಡಿಕೊಂಡು ಕ್ರಿಸ್ತನೊಂದಿಗೆ ವೈಯಕ್ತಿಕ ಸಂಬಂಧ ಹೊಂದುವುದಕ್ಕೆ ಸಹಕರಿಸಿ. (1 ಯೋಹಾನ 5:11-13).

12. ಆತ್ಮೀಕ ಬೆಳವಣಿಗೆಯ "ನಾಲ್ಕು ವಿಷಯಗಳನ್ನು" ಪುನರಾವರ್ತಿಸಿ. ನಾಲ್ಕು ವಿಷಯ (ವಿಚಾರ)ಗಳ ವೃತ್ತದ ವಾಕ್ಯಗಳನ್ನು ನೆನಪಿನಲ್ಲಿಡಿ.

    ಎ) ನಾನು ಪ್ರಾರ್ಥನೆ ಮತ್ತು ಸ್ತುತಿಗಳ ಮೂಲಕ ದೇವರೊಂದಿಗೆ ಮಾತನಾಡುತ್ತೇನೆ. (ಫಿಲಿಪ್ಪಿ 4:6-7, ಇಬ್ರಿಯ 13:15).

    ಬಿ) ದೇವರು ತನ್ನ ವಾಕ್ಯಗಳ ಮೂಲಕ ಮಾತನಾಡುತ್ತಾನೆ. (2 ತಿಮೋ 2:5, 1 ಪೇತ್ರ 2:2).

    ಸಿ) ನಾನು ಅನ್ಯೋನ್ಯತೆ, ಸಹಬಾಗಿತ್ವದ ಮೂಲಕ ಬೇರೆ ಕ್ರೈಸ್ತರೊಂದಿಗೆ ಮಾತನಾಡುತ್ತೇನೆ. (1 ಯೋಹಾ 1:3, ಇಬ್ರಿ 10:24-25).

    ಡಿ) ನಾನು ಸಾಕ್ಷಿ ಕೊಡುವುದರ ಮೂಲಕ ಅನ್ಯ ರೊಂದಿಗೆ ಮಾತನಾಡುತ್ತೇನೆ. (ಅ.ಕೃ.1:8, ಮತ್ತಾಯ 28:19-20).

13. ಅವರನ್ನು ಸತ್ಯವೇದದ ಮಾದರಿಯ ಮುಖಾಂತರ ನಿಜ ಸತ್ಯತೆಗೆ ಬರುವಂತೆ ಮಾಡುತ್ತೇನೆ.

14. ಅವರಿಗೆ ಯೇಸುಕ್ರಿಸ್ತ ಕೇಂದ್ರ ವ್ಯಕ್ತಿಯಾಗಿರುವ ಇತರೆ ಪುಸ್ತಕಗಳನ್ನು ಕೊಡಿ. (ಸತ್ಯವೇದದ ಅಧ್ಯಯನ ಪುಸ್ತಕಗಳು, ಚಿತ್ರಪಟಗಳು, ವಿಡಿಯೋ, ಸಿ.ಡಿ. ಇತ್ಯಾದಿ)

15. ದೇವರ ವಾಕ್ಯಗಳನ್ನು ನೆನಪಿನಲ್ಲಿಡುವುದಕ್ಕೆ ಅವರಿಗೆ ಉತ್ತೇಜನ ನೀಡಿ. (ಕೀರ್ತ 119:9-11).

16. ಅವರ ಜೊತೆಯಲ್ಲಿ ಮತ್ತು ಅವರಿಗಾಗಿ ಪ್ರಾರ್ಥಿಸಿರಿ. ಅವರ ಕುಟುಂಬದ ಅಗತ್ಯತೆಗಳಿಗೆ, ಹಣಕಾಸಿಗೆ ಸಂಬಂಧಿಸಿದ ಮತ್ತು ಇತರೆ ವಿಷಯಗಳಿಗೆ ಪ್ರಾರ್ಥಿಸಿರಿ.

17. ಕ್ರಿಸ್ತನನ್ನು ಇತರರೊಟ್ಟಿಗೆ ಹಂಚಿಕೊಳ್ಳಲು ಅವರನ್ನು ಉತ್ತೇಜಿಸಿ. (ಲೂಕ 8:39).

    ಎ) ಅವರು ಹೇಗೆ ಸಾಕ್ಷಿ ಕೊಡಬೇಕು ಎಂಬುದನ್ನು ತಿಳಿಸಿಕೊಡಿ. (ಸಾಕ್ಷ್ಯದ ಹಾಳೆಗಳ 4 ಪಾಠಗಳನ್ನು ಉಪಯೋಗಿಸಿ).

    ಬಿ) ಆತ್ಮೀಕ ವಿಷಯವನ್ನು ಅಥವಾ ಸುವಾರ್ತೆಯನ್ನು ಹಂಚುವ ಬಗ್ಗೆ ಬೋಧಿಸಿ.


    ಸಿ) ಶಿಷ್ಯರಾಗುವುದು ಹೇಗೆ ಮತ್ತು ಶಿಷ್ಯರಾಗಿ ಮಾಡುವುದು ಹೇಗೆ ಎಂಬುದನ್ನು ಬೋಧಿಸಿ.

18. ಅವರನ್ನು ಚರ್ಚುಗಳಿಗೆ, ಸತ್ಯವೇದದ ಅಧ್ಯಯನ ಕೂಟಗಳಿಗೆ, ಅನ್ಯೋನ್ಯತೆ ಗುಂಪುಗಳ ಕೂಟಗಳಿಗೆ ಕರೆತನ್ನಿ.

19. ಸಾಧ್ಯವಾದರೆ ಸ್ಥಳೀಯ, ಅಂತರಾಷ್ಟ್ರೀಯ ಸತ್ಯವೇದ ಬೋಧನೆಯ ಚಟುವಟಿಕೆಗಳಲ್ಲಿ ಸೇರುವ ಅವಕಾಶ ಕಲ್ಪಿಸಿ.

20. ಅಂತಿಮವಾಗಿ, ಅವರು ದೇವರ ವಾಕ್ಯದಲ್ಲಿ ಅನ್ಯೋನ್ಯರಾಗಿದ್ದುಕೊಂಡು, ಗಂಡ-ಹೆಂಡತಿಯಾಗಿ, ಪರಿಶುದ್ಧವಾಗಿ, ಮಕ್ಕಳನ್ನು ಬೆಳೆಸುವ ವಿಷಯ, ವಿಧೇಯತೆ, ಹಣಕಾಸು, ಇತರೆ ವಿಷಯಗಳಲ್ಲಿ ಮಾದರಿಯಾಗಿರುವಂತೆ ತಿಳಿಸಿ.

# ಆತ್ಮೀಕ ಬೆಳವಣಿಗೆಯ ನಾಲ್ಕು ವಿಚಾರಗಳು



# ದೇವರ ವಾಕ್ಯವನ್ನು ಪರಿಣಾಮಕಾರಿಯಾಗಿ ಬೋಧಿಸುವುದು ಹೇಗೆ?



1. ನಿಮ್ಮನ್ನು ದೇವರಿಗೆ ಒಪ್ಪಿಸಿಕೊಳ್ಳಿ (ತೆರೆದುಕೊಳ್ಳಿ), ಕರ್ತನಿಗೆ ಆತನ ಪ್ರಸನ್ನತೆಯನ್ನು ಮತ್ತು ಪವಿತ್ರಾತ್ಮನನ್ನು ಕರುಣಿಸುವಂತೆ ಕೇಳಿಕೊಳ್ಳಿ. (ರೋಮಾ 12:1, ಎಫೆಸ 5:18).

2. ನಿಮ್ಮ ಕೇಳುಗರಿಗೆ ದೇವರು ಒಳ್ಳೆಯ ಹೃದಯವನ್ನು ಕೊಡುವಂತೆ ಪ್ರಾರ್ಥಿಸಿ. ಆ ಗುಂಪು ಆತ್ಮೀಕ ಬಲವನ್ನು ಹೊಂದುವುದಕ್ಕೆ ಸಹ ಪ್ರಾರ್ಥಿಸಿರಿ. ನಿಮಗಾಗಿ, ನೀವು ಶೇ.100 ರಷ್ಟು ಕಾರ್ಯ ಮಾಡಲು ಪ್ರಾರ್ಥಿಸಿರಿ.

3. ನಿಮ್ಮ ಸಮಯವನ್ನು ನಿಗಧಿ ಮಾಡಿಕೊಳ್ಳಿ, ನಿಮ್ಮ ಮಾತಿನ ವೇಗವನ್ನು ಸಹ ನಿರ್ದರಿಸಿ. ಉದಾ: 1ಕ್ಕಾಗಿ 2, ಅಂದರೆ 1 ಗಂಟೆ ಭೇದಿಸಲು 2 ಗಂಟೆ ತಯಾರಿಯ ಅಗತ್ಯವಿದೆ.

4. ಈ ಕೆಳಗಿನಂತೆ ಸಿದ್ದವಾಗಿ:-

   ಎ) ನಿಮ್ಮ ಮಾತಿಗೆ, ವಿಷಯಕ್ಕೆ ಸಹಕಾರಿಯಾದ ಸತ್ಯವೇದ ವಾಕ್ಯಗಳು.

   ಬಿ) ನಿಮ್ಮ ಮಾತುಗಳಿಗೆ, ವಿಷಯಕ್ಕೆ, ಅಂಶಗಳಿಗೆ ಸಹಕಾರಿಯಾದ ದೃಶ್ಯ ವಿಷಯವಸ್ತುಗಳು:- ಚಿತ್ರಪಟಗಳು, ಕಂಪ್ಯೂಟರ್, ಓವರ್ ಹೆಡ್ ಪ್ರೊಜೆಕ್ಟರ್, ವಿಡಿಯೋ ಇತ್ಯಾದಿ. (ನೆನಪಿರಲಿ, ಒಂದು ಚಿತ್ರ ಸಾವಿರ ಮಾತುಗಳಿಗೆ ಸಮವಾಗಿದೆ.)

   ಸಿ) ಮುಖ್ಯಾಂಶಗಳನ್ನು ಹಾಳೆಗಳಲ್ಲಿ ಗುರುತು ಹಾಕಿಕೊಳ್ಳಿ, ಇವು ನಿಮ್ಮ ಚರ್ಚೆಗಳಿಗೆ ಸಹಕಾರಿಯಾಗಿದೆ.

   ಡಿ) ಒಳ್ಳೆಯ ಕಥೆಗಳ ಮೂಲಕ ವಿವರಿಸಿ. ನೆನೆಪಿರಲಿ ಯೇಸು ಯಾವಾಗಲೂ ಕಥೆಗಳ ಮೂಲಕ ತಿಳಿಸುತ್ತಿದ್ದ. ಜನರು ಕಥೆಗಳನ್ನು ಇಷ್ಟಪಡುತ್ತಾರೆ.

5. ಗುಂಪು ಚಿಕ್ಕದಾಗಿದ್ದರೆ ಅಲ್ಲಿನ ಜನರ ಹೆಸರುಗಳನ್ನು ತಿಳಿದು ಅವರ ಹೆಸರುಗಳನ್ನು ಉಪಯೋಗಿಸಿ ಬೋಧಿಸಿ. ದೊಡ್ಡ ಗುಂಪಾಗಿದ್ದರೆ, ಗುಂಪುಗಳಲ್ಲಿ ಹಲವು ಚಿಕ್ಕ ಗುಂಪಾಗಿ ವಿಂಗಡಿಸಿ ಗುಂಪನ್ನು ಸಂಭೋದಿಸಿ ವಿವರಿಸಿ.

6. ನಿಮ್ಮ ತಲೆ ಮತ್ತು ಮುಖ ಕೇಳುಗರಿಗೆ ಕಾಣುವಂತೆ ಇರಲಿ.

7. ಆದಷ್ಟು ಕೇಳುಗರಿಗೆ ಹತ್ತಿರವಾಗಿದ್ದು ಮಾತನಾಡಿ.

8. ನಿಮ್ಮ ಪ್ರೀತಿ, ಅನ್ಯೋನ್ಯತೆಯನ್ನು ಅವರಿಗೆ ವ್ಯಕ್ತಪಡಿಸಿ. ನಿಮ್ಮ ಮುಖದಲ್ಲಿ ಮಂದಹಾಸ್ಯವಿರಲಿ.

9. ನಿಮ್ಮ ವಸ್ತ್ರಗಳು ಗೌರವಯುತವಾಗಿರಲಿ ಮತ್ತು ಸಮಯಕ್ಕೆ ತಕ್ಕ ಹಾಗೆ ಇರಲಿ. ಎಲ್ಲಾ ಕಾರ್ಯಗಳನ್ನು ಬುದ್ದಿವಂತಿಕೆಯಿಂದಲೂ ವಿವೇಕ ಪೂರ್ಣವಾಗಿಯೂ ಮಾಡುವವರಾಗಿರಿ. (1 ಕೊರಿ 10:31)

# ಸಣ್ಣ ಗುಂಪಿಗೆ ತರಬೇತಿ



**1. ಹೇಗೆ ಪ್ರಾರಂಭಿಸಬೇಕು:-**

ಎ) ಪ್ರಾರ್ಥನೆ ಮಾಡಿ ಸಹ ಕ್ರೈಸ್ತರ ಹೆಸರನ್ನು (ಅನ್ಯರಲ್ಲೆಲ್ಲ) ಆಯ್ಕೆ ಮಾಡಿ. ಆಸಕ್ತಿಯುಳ್ಳವರನ್ನು ನೇರವಾಗಿ ಅಥವಾ ಫೋನ್ ಮುಖಾಂತರ ಆಹ್ವಾನ ಮಾಡಿ.

ಬಿ) ಗುಂಪನ್ನು 12 ಜನಕ್ಕೆ ಸೀಮಿತ ಗೊಳಿಸಿ. ಬಂದಿರುವ ಎಲ್ಲರಿಗೆ ಶುಭವನ್ನು ಹಾರೈಸಿ, ಗಂಡಸರಿಗೆ, ಹೆಂಗಸರಿಗೆ, ಅದು ದಂಪತಿಯರಿಗೆ ಇತ್ಯಾದಿ.

ಸಿ) ಒಂದು ಸ್ಥಳವನ್ನು ನಿಗಧಿ ಮಾಡಿ. ಸಾಧ್ಯವಾದಷ್ಟು ಮನೆಯಾಗಿದ್ದರೆ ಉತ್ತಮ. ಎಲ್ಲರೂ ಸೇರಲು ಒಂದು ಸಮಯ ನಿಗಧಿ ಮಾಡಿ. ವಾರದಲ್ಲಿ ಒಂದು ದಿನ ಅಥವಾ ತಿಂಗಳಿಗೆ ಎರಡು ಭಾರಿ ಸುಮಾರು 2 ಗಂಟೆಯಾದರೆ ಉತ್ತಮ.

ಡಿ) ಯಾರು ಕೂಟವನ್ನು ಆಯೋಜನೆ, ಮಾಡಿರುವರೋ ಅವರು ಬಂದಿರುವವರಿಗೆ ಉಪಹಾರ ವ್ಯವಸ್ಥೆ ಮಾಡಿದರೆ ಉತ್ತಮ.

**2. ಕೆಲವು ಮೂಲಭೂತ ನಿಯಮಗಳು (ಅಂಶಗಳು) :-**

ಎ) ಕ್ರಿಸ್ತನಿಗೆ ಮೊದಲ ಆಧ್ಯತೆ.

ಬಿ) ಸತ್ಯವೇದ ನಮ್ಮ ಅಧ್ಯಯನ ಪುಸ್ತಕವಾಗಿರಬೇಕು. ಅರ್ಥಗರ್ಭಿತ ಭಾಗವನ್ನು ಆರಿಸಿಕೊಳ್ಳಬೇಕು.

ಸಿ) ಮುಂದಾಳತ್ವ (ನಾಯಕತ್ವ) ವಹಿಸುವವರು ಎಲ್ಲರ ಮೇಲೆ ಅಧಿಕಾರ ಚಲಾಯಿಸಬಾರದು. ಎಲ್ಲರಿಗೂ ಭಾಗವಹಿಸಲು ಅವಕಾಶ ನೀಡಬೇಕು.

ಡಿ) ಮುಂದಾಳತ್ವ ವಹಿಸುವವರು ತಾವು ಮಾತನಾಡುವ ವಿಷಯಗಳಲ್ಲಿ ಸರಿಯಾದ ತಯಾರಿ ಮಾಡಿಕೊಂಡು ಚರ್ಚೆ ಮಾಡಬೇಕು.

ಈ) ಬಂದಿರುವ ಜನಗಳ ಹೆಸರನ್ನು ಚರ್ಚೆಯ ಸಂದರ್ಭಲ್ಲಿ ಬಳಸಬೇಕು.

ಎಫ್) ಗುಂಪಿನ ಜನಗಳ ಅಗತ್ಯತೆಗಳಿಗೆ ಸ್ಪಂದಿಸಬೇಕು, ಒಬ್ಬರಿಂದ ಒಬ್ಬರು ಕಲಿಯಲು ಆಸಕ್ತಿಯಿಂದ ಇರಬೇಕು. ಪ್ರೀತಿಯಿಂದ ಇರಬೇಕು. ಬೇರೆಯವರ ಅಗತ್ಯತೆಗಳಿಗೆ ಸಹಕರಿಸಬೇಕು. (ಪ್ರಾರ್ಥನೆ, ಸಹಬಾಗಿತ್ವ, ಸಹಕಾರ, ಇತ್ಯಾದಿ)

ಜಿ) ಒಬ್ಬರಿಗೊಬ್ಬರು ಪ್ರಾರ್ಥನೆಯ ಮೂಲಕ ಉತ್ತೇಜನ ನೀಡಬೇಕು.

ಎಚ್) ಹೊಂದಾಣಿಕೆಯಿಂದ ಸಮತೋಲನವನ್ನು ಕಾಪಾಡಬೇಕು. (ಆರಾಧನೆ, ಸಂಗೀತ, ಸ್ತುತಿ, ವಿಚಾರಹಂಚಿಕೆ ಇತ್ಯಾದಿ ಎಲ್ಲಾ ವಿಷಯಗಳಲ್ಲಿ)

**3. ಚರ್ಚೆಗೆ ಉತ್ತೇಜನ ಗೊಳಿಸುವ ಸಲಹೆಗಳು :-**

ಎ) ಸತ್ಯವೇದದ ಭಾಗವನ್ನು ಗುಂಪಿನವರು ಓದಿ ಅದರ ಬಗ್ಗೆ ಚರ್ಚೆ ಮಾಡುವುದು.

ಬಿ) ಗುಂಪಿನವರಿಗೆ ತಾವು ಓದಿದ ಭಾಗವನ್ನು ಪುನರ್‌ಮನನ ಮಾಡಲು ಕೆಲವು ನಿಮಿಷಗಳ ಕಾಲಾವಕಾಶ ನೀಡಿ ಮೌನವಾಗಿರುವುದು.

ಸಿ) ತಾವು ಓದಿದ ಭಾಗದಲ್ಲಿನ ಪದಗಳ ಬೇರೆ ಬೇರೆ 2-3 ಅರ್ಥಗಳನ್ನು ತಿಳಿದುಕೊಳ್ಳಲು ಚರ್ಚಿಸುವುದು.

ಡಿ) ನೇರವಾದ ಮತ್ತು ಅಧ್ಯಯನಕ್ಕೆ ಅನುಕೂಲಕರ ಪ್ರಶ್ನೆಗಳನ್ನು ಕೇಳುವುದು.

1) ಈ ಪದದ ಅಥವ ವಾಕ್ಯದ ಅರ್ಥವೇನು?

2) ದೇವರು ನಮ್ಮಲ್ಲಿ ಏನು ಬದಲಾವಣೆ ಆಗಬೇಕೆಂದು ತಿಳಿಸಿದ್ದಾನೆ?

3) ನಮ್ಮ ಕಾರ್ಯಗಳಲ್ಲಿ, ವರ್ತನೆಗಳಲ್ಲಿ ನಾವು ಹೇಗೆ ಈ ವಿಷಯಕ್ಕೆ ಸಂಬಂಧಿಸಿದ್ದೇವೆ?

4) ನಿಮಗೆ ಈ ವಿಷಯ ಎಂತಹ ಅನುಭವ ನೀಡಿದೆ.

5) ಈ ವಿಷಯ ನಿಮಗೆ ಹೇಗೆ ಸಹಕಾರಿಯಾಗಿದೆ? ಉದಾಹರಣೆಗಳನ್ನು ಕೊಡಿ.

6) ಯಾವ ರೀತಿಯಲ್ಲಿ ಸತ್ಯವನ್ನು ನನ್ನ ಜೀವಿತದಲ್ಲಿ ಅಳವಡಿಸಿಕೊಳ್ಳಬಹುದು?

7) ನಾನು ಈ ವಿಷಯಕ್ಕೆ ಬರಲು ತಡೆಯಾಗಿರುವ ಅಂಶಗಳಾವುವು? ಅವುಗಳಿಂದ ಹೊರಬರುವುದು ಹೇಗೆ?

8) ನನ್ನ ಜೀವಿತಕ್ಕೆ ಹೋಲಿಕೆಯಾಗಿರುವ ಸತ್ಯವೇದದ ಸಂಗತಿಗಳು ಯಾವುವು?

9) ಓದಿದ ವಾಕ್ಯಗಳಲ್ಲಿ ಯಾವ ವಿಷಯ ಅಥವ ಸಂಗತಿ ಅರ್ಥವಾಗಲಿಲ್ಲ.

**4. ಸತ್ಯವೇದದ ಕೆಲವು ಸಂಗತಿಗಳ ಮೂಲಕ ಸಲಹೆ :-**

ಎ) ಎಫೆಸದವರಿಗೆ 4:1-3

ಬಿ) ಎಫೆಸದವರಿಗೆ 4:24-32

ಸಿ) ಎಫೆಸದವರಿಗೆ 5:1-11

ಡಿ) 1 ಥೆಸಲೋನಿಕ 5:14-23

ಈ) ಕೊಲೊಸ್ಸೆ 3:12-17

ಎಫ್) ಫಿಲಿಪ್ಪಿ 3:4-8

ಜಿ) ರೋಮಾಪುರ 12:9-17

ಎಚ್) ಇಬ್ರಿಯರಿಗೆ 10:23-25

ಐ) 2 ಪೇತ್ರ 1:3-8

ಜೆ) 1 ಪೇತ್ರ 5:1-9

ಕೆ) 2 ಕೊರಿಂಥ 6:4-7

ಎಲ್) ಫಿಲಿಪ್ಪಿ 2:1-11



# ನಿಮ್ಮ ಸತ್ಯವೇದವನ್ನು ಅಧ್ಯಯನ ಮಾಡುವುದು ಹೇಗೆ?

ಈ ಕೆಳಗಿನ ಸಲಹೆಗಳು ನಿಮಗೆ ಸತ್ಯವೇದವನ್ನು ಹೇಗೆ ವ್ಯವಸ್ಥಿತವಾಗಿ ಅಧ್ಯಯನ ಮಾಡಬಹುದು, ಅದರಿಂದ ದೇವರ ಅಮೂಲ್ಯ ವಾಕ್ಯಗಳನ್ನು ತಿಳಿದು ನಮ್ಮ ಜ್ಞಾನ ಶ್ರೀಮಂತಿಕೆಯನ್ನು ಹೆಚ್ಚಿಸಿಕೊಳ್ಳಬಹುದೆಂಬುದನ್ನು ತಿಳಿಸುತ್ತವೆ.

**1. ದೇವರ ವಾಕ್ಯವನ್ನು ಅಧ್ಯಯನ ಮಾಡಲು ಕಾರಣಗಳೇನು:**

ಎ) ಅದು ನಮಗೆ ಆತ್ಮೀಕವಾಗಿ ಬೆಳೆಯಲು ಸಹಕರಿಸುತ್ತದೆ. (1ಪೇತ್ರ 2:2)

ಬಿ) ಕ್ರಿಸ್ತನಿಗೆ ಸೇವೆ ಮಾಡಲು ತಯಾರಿ ಮಾಡುತ್ತದೆ. (2 ತಿಮೋಥೆ 3:16-17)

ಸಿ) ನಮ್ಮ ನಂಬಿಕೆಯನ್ನು ಹೆಚ್ಚಿಸುತ್ತದೆ. (ರೋಮಾ 10:17)

ಡಿ) ದೇವರಿಗೆ ಸ್ತೋತ್ರ ಸಲ್ಲಿಸುವುದುನ್ನು ತೋರಿಸಿಕೊಡುತ್ತದೆ. (1 ಥೆಸ 4:1-2)

**2. ಅಧ್ಯಯನಕ್ಕೆ ಸಹಕಾರಿಯಾಗುವ ಪ್ರಾಯೋಗಿಕ ಅಗತ್ಯತೆಗಳು:**

ಎ) ಅಧ್ಯಯನಕ್ಕೆ ಅಗತ್ಯವಾದ ಸಲಕರಣೆಗಳೆಂದರೆ :

1. ಸತ್ಯವೇದ
2. ಒಂದು ನೋಟ್‌ಬುಕ್, ಬಾಲ್ ಪಾಯಿಂಟ್ ಪೆನ್ ಮತ್ತು ಪೆನ್ಸಿಲ್ ಸತ್ಯವೇದದಲ್ಲಿ ಗುರುತು ಮಾಡಿಕೊಳ್ಳಲು.
3. ಬೈಬಲ್ ಕನ್‌ಕಾರ್ಡೆನ್ಸ್ (ಸ್ಟ್ರಾಂಗ್ ಅಥವಾ ಯಂಗ್ ರವರದು)

ಬಿ) ಅಧ್ಯಯನಕ್ಕೆ ಸಹಾಯಕ ಅಂಶಗಳು :

1. ನೇಟ್ಸ್ ಟಾಪಿಕಲ್ ಬೈಬಲ್
2. ಬೇರೆ ಬೇರೆ ಭಾಷಾಂತರದ ಇಂಗ್ಲೀಷ್ ಬೈಬಲ್‌ಗಳು (N.I.V., K.J.V., etc.,)
3. ಬೈಬಲ್ ಡಿಕ್ಷನರಿ (ಸತ್ಯವೇದ ಅರ್ಥಕೋಶ)
4. ಗ್ರೀಕ್ - ಇಂಗ್ಲೀಷ್ ಲೆಕ್ಸಿಕಾನ್.

**3. ಯಶಸ್ವೀ ಅದ್ಯಯನದ ಕೀಲಿಕೈಗಳು:**

ಎ) ನೀವು ದೇವರ ವಾಕ್ಯಗಳನ್ನು ತಿಳಿಯಲು ಆಸಕ್ತಿ ಹೊಂದಿ (ಅ.ಕೃ. 17:11).

ಬಿ) ಪವಿತ್ರಾತ್ಮನ ಮಾರ್ಗದರ್ಶನಕ್ಕೆ ಪ್ರಾರ್ಥಿಸಿರಿ. (ಯೋಹಾ 16:13)

ಸಿ) ಆತನ ವಾಕ್ಯಗಳನ್ನು ಅಧ್ಯಯನ ಮಾಡಿ, ಸುಮ್ಮನೆ ಓದಬೇಡಿ. (2 ತಿಮೋಥೆ 2:15)

ಡಿ) ಮುಖ್ಯ ವಚನಗಳನ್ನು ನೆನಪಿನಲ್ಲಿಡಿ. (ಕೀರ್ತ 119:11)

ಈ) ಅಧ್ಯಯನಕ್ಕೆ ಒಂದು ಸಮಯವನ್ನು ಮೀಸಲಾಗಿಡಿ.

ಎಫ್) ನೀವು ತಿಳಿದುಕೊಂಡ ವಾಕ್ಯಗಳಿಗೆ ವಿಧೇಯರಾಗಿರಿ. (ಯಾಕೋಬ 1:22)

ಜಿ) ಸತ್ಯವೇದವು ದೇವರ ಪ್ರೀತಿಯನ್ನು ತೋರಿಸುವಂತದಾಗಿದೆ ಮತ್ತು ಕ್ರಿಸ್ತನೇ ಮುಖ್ಯವಾಗಿದ್ದಾನೆ ಎಂಬುದನ್ನು ನೆನಪಿನಲ್ಲಿಡಿ. (ಯೋಹಾನ 20:31)

**4. ವಿವರಿಸಲು ಇರುವ ಕೆಲವು ನಿಯಮಗಳು:**

ಎ) ಯಾವಾಗಲೂ ವಾಕ್ಯವನ್ನು ಯಾವ ಅರ್ಥದಲ್ಲಿ ಬಳಸಲಾಗಿದೆಯೋ ಅದೇ ಅರ್ಥದಲ್ಲಿ ತಿಳಿಸಿ. ಆ ವಾಕ್ಯದ ಹಿಂದಿನ ಕೆಲವು ಮತ್ತು ಮುಂದಿನ ಕೆಲವು ವಚನಗಳನ್ನು ಅಧ್ಯಯನ ದೃಷ್ಟಿಯಿಂದ ಓದಿ.

ಬಿ) ನೀವು ಓದಿದ ಭಾಗವನ್ನು ಇತರೆ ಬೇರೆ ಭಾಷಾಂತರ ಗ್ರಂಥಗಳ ಜೊತೆ ಹೋಲಿಸಿ ಅರ್ಥಮಾಡಿಕೊಳ್ಳಿ.

ಸಿ) ಆ ವರ್ಷ ಯಾರಿಂದ, ಯಾರಿಗೆ, ಯಾವ ಸಂದರ್ಭದಲ್ಲಿ ತಿಳಿಸಿದೆ ಎಂಬುದನ್ನು ಸರಿಯಾಗಿ ಅರ್ಥಮಾಡಿಕೊಳ್ಳಿ.

ಡಿ) ಮುಖ್ಯಾಂಶಗಳನ್ನು ಹೆಚ್ಚಾಗಿ ಗಮನಿಸಿ ವ್ಯತ್ಯಾಸ ತಿಳಿಯಬೇಕು. (ಯೋಹಾನ 1:17)

ಈ) ಯಾವಾಗಲೂ ಸ್ಪಷ್ಟವಾಗಿರುವ ಸಂಗತಿಗೆ ಹೆಚ್ಚು ಆದ್ಯತೆ ನೀಡಿ.

ಎಫ್) ಎಲ್ಲಾ ವಿವರಣೆಗಳಿಗೆ ಮೂಲಪದದ ಅರ್ಥವು ಆಧಾರ ಮತ್ತು ಸರಿಯಾದುದು ಆಗಿರುತ್ತದೆ.

ಜಿ) ಹೊಸ ಒಡಂಬಡಿಕೆಯನ್ನು ಸದಾ ಹುಡುಕುತ್ತಿದ್ದರೆ ಹೆಚ್ಚಿನ ವಿಷಯ ತಿಳಿಯುತ್ತದೆ, ಅದೇ ರೀತಿ ಹಳೇ ಒಡಂಬಡಿಕೆ ಸಹ.

**5. ಸತ್ಯವೇದ ಅಧ್ಯಯನ ಮಾಡುವ ವಿಧಾನಗಳು:**

ಎ) ವಿಷಯಾಧರಿತ ಅಧ್ಯಯನ

ಎಲ್ಲಾ ವಿಷಯಗಳನ್ನು ಹುಡುಕಿ, ತಿಳಿದು ಸತ್ಯವೇದವು ರಕ್ಷಣೆಯ ಮಾರ್ಗವಾಗಿದೆ, ಪವಿತ್ರಾತ್ಮ ದೊರಕುತ್ತದೆ ಮತ್ತು ನಿತ್ಯ ಜೀವದ ಬಾದ್ಯತೆ ಇದೆ ಎಂದು ತಿಳಿಯುವುದು.

ಬಿ) ಸಾಂಕೇತಿಕ ಅಧ್ಯಯನ:

ಸತ್ಯವೇದದಲ್ಲಿ ತಿಳಿಸಿರುವ ವಿಷಯಗಳನ್ನು ಹೋಲಿಕೆ ಮಾಡಿ ಅಧ್ಯಯನ ಮಾಡುವುದು. (ಸಂಕೇತವೆಂದರೆ, ಸತ್ಯವೇದದಲ್ಲಿ ಆತ್ಮೀಕ ವಿಷಯವನ್ನು ಸಾಂಕೇತಿಕವಾಗಿ ತಿಳಿಸಿರುವುದು.) ಉದಾ: ಆದಾಮ ಕ್ರಿಸ್ತನಿಗೆ ಹೋಲಿಕೆಯಾಗಿದ್ದಾನೆ. (ಛಾಯೆ) (ರೋಮಾ 5:14). ಮೆಲ್ಕಿಜೆದೆಕ ಯೇಸುವಿಗೆ ಛಾಯೆಯಾಗಿದ್ದಾನೆ. (ಇಬ್ರಿಯ 5:6).

ಸಿ) ಜೀವನ ಚರಿತ್ರೆಗಳ ಮೂಲಕ ಅಧ್ಯಯನ:

ಸತ್ಯವೇದದಲ್ಲಿ ಬರುವ ವ್ಯಕ್ತಿಗಳ ಜೀವನ ಚರಿತ್ರೆಯನ್ನು ಅಭ್ಯಸಮಾಡಿ, ಅವರ ಜೀವಿತ, ಪಾಪಗಳು, ಕಾರ್ಯಗಳು, ಗೆಲುವುಗಳ ಮೂಲಕ ದೇವರು ಹೇಗೆ ಕೆಲಸ ನಡೆಸಿದ್ದಾನೆ ಎಂದು ಅಧ್ಯಯನ ಮಾಡುವುದು.

ಡಿ) ವಾಕ್ಯಾಧಾರಿತ ಅಧ್ಯಯನ:

ಸತ್ಯವೇದದಲ್ಲಿರುವ ವಾಕ್ಯ ಅಥವಾ ಪದಗಳ ಮೂಲಾರ್ಥವನ್ನು, ಭಾಷಾಂತರವನ್ನು, ಕನ್‌ಕಾರ್ಡೇನ್ಸ್, ಡಿಕ್ಷನರಿ (ಶಬ್ದಕೋಶ, ಅರ್ಥಕೋಶ)ಗಳ ಮೂಲಕ ಅರ್ಥವನ್ನು ತಿಳಿದುಕೊಂಡು ಅಧ್ಯಯನ ಮಾಡುವುದು.

ಈ) ಗ್ರಾಂಥಿಕ ಅಧ್ಯಯನ:

ಸತ್ಯವೇದವನ್ನು ಒಂದು ಗ್ರಂಥವಾಗಿ ಅಧ್ಯಯನ ಮಾಡುವುದು. ಇಲ್ಲಿರುವ ವಿಷಯಗಳೇನು? ಇವುಗಳನ್ನು ನಾನು ಹೇಗೆ ಅನ್ವಯಿಸಿಕೊಳ್ಳಬಹುದು ಎಂದು ಪ್ರಶ್ನೆಯೊಡನೆ ಅಧ್ಯಯನ ಮಾಡುವುದು.

**6. ನಿಮ್ಮ ಸತ್ಯವೇದದಲ್ಲಿ ಗುರುತು ಹಾಕಿಕೊಳ್ಳುವುದು ಹೇಗೆ?**

ಸತ್ಯವೇದವನ್ನು ಸರಿಯಾದ ಮಾದರಿಯಲ್ಲಿ, ವ್ಯವಸ್ಥಿತವಾಗಿ ಗುರುತು ಹಾಕಿಕೊಂಡು ಅಧ್ಯಯನ ಮಾಡಿದರೆ ಯಶಸ್ವಿಯಾಗಿ ಅಧ್ಯಯನ ಮಾಡಬಹುದು.

ಎ) ಮುಖ್ಯವಾದ ವಾಕ್ಯ ಅಥವ ವಿಷಯದ ಕೆಳಗೆ ಪೆನ್ನಿನಿಂದ ಅಡ್ಡಗೆರೆ ಹಾಕಿರಿ.

ಬಿ) ಬೇರೆ ಬೇರೆ ವಿಷಯಗಳನ್ನು ಗುರುತಿಸಲು ಬೇರೆ ಬೇರೆ ಬಣ್ಣದ ಪೆನ್ನುಗಳನ್ನು ಉಪಯೋಗಿಸಿ.

ಉದಾ: ಆತ್ಮೀಕ ವಿಷಯಕ್ಕೆ ಹೆಸರು, ಕ್ರಿಸ್ತನಿಗೆ ಕೆಂಪು etc.,

ಸಿ) ಮುಖ್ಯ ವಿಷಯಗಳ ಮೊದಲ ಅಕ್ಷರಗಳನ್ನು ಗುರುತು ಹಾಕಿಕೊಳ್ಳುವುದು.

ಡಿ) ಅಡಿ ಟಿಪ್ಪಣಿ, ಪಾರ್ಶ್ವದಿಕ್ಕುಗಳ ಮೂಲಕ ಗುರುತುಹಾಕಿಕೊಳ್ಳುವುದು.

ಈ) ಒಂದು ವಾಕ್ಯಕ್ಕೆ ಇನ್ನೊಂದು ವಾಕ್ಯವನ್ನು ಹೋಲಿಸಿ ನೀಡಲು ಸರಪಳಿ ವಿವರಣೆಯನ್ನು (Chain Reference) ರೂಢಿಸಿಕೊಳ್ಳಿ. ಇದರಿಂದ ನೀವು ಸರಳವಾಗಿ ಸತ್ಯವೇದ ಅಧ್ಯಯನ ಮಾಡಬಹುದು.

# ನಮ್ಮ ಗುರಿ

**ಮತ್ತಾಯ 28:18-20 ಓದಿರಿ.**


**ಗುರಿ = "ಯೇಸುವಿನ ಮಹಾ ಆಜ್ಞೆಯನ್ನು, ಕಾರ್ಯವನ್ನು ಪರಿಪೂರ್ಣಗೊಳಿಸಲು ಸಹಕರಿಸುವುದು"**

- ✦ **ವಚನ 18 : ಸಮಯದ ಪ್ರಾಮುಖ್ಯತೆ ತಿಳಿಯಿರಿ.**
- ✦ **ವಚನ 18 : ಕ್ರಿಸ್ತನಿಗೆ ಪರಲೋಕ ಮತ್ತು ಭೂಲೋಕದ "ಎಲ್ಲಾ" ಅಧಿಕಾರ ಕೊಡಲ್ಪಟ್ಟಿದೆ.**
- ✦ **ವಚನ 19 : "ಆದ್ದರಿಂದ" ...... "ಹೋಗಿ" (ನಿಲ್ಲುವುದಕ್ಕೆ ವಿರುದ್ಧ ಪದ)**
- ✦ **ವಚನ 19 : ಏತಕ್ಕಾಗಿ ಹೋಗಬೇಕು : "ಶಿಷ್ಯರನ್ನಾಗಿ ಮಾಡುವುದಕ್ಕೆ"**
  - ✦ **ಶಿಷ್ಯಕನ್ನಾಗಿ ಮಾಡುವುದು ಎಂದರೆ, ಯೇಸುವನ್ನು ಹಿಂಬಾಲಿಸುವಂತವರನ್ನು ಕ್ರಿಸ್ತನಲ್ಲಿ ಬೆಳವಣಿಗೆ ಹೊಂದುವುದಕ್ಕೆ ಸೇರಿಸುವುದು.**


- ✦ 19 - "ದೀಕ್ಷಾಸ್ನಾನ ಮಾಡಿಸಿ"

  **ಅಂದರೆ, ಅವರು ಸಾರ್ವಜನಿಕವಾಗಿ ಕ್ರಿಸ್ತನ ನಂಬಿಕೆಗೆ ಬರುವುದು ಮತ್ತು ಕ್ರಿಸ್ತನ ದೇಹಕ್ಕೆ ಸೇರುವುದು.**
- ✦ 20 - "ಭೋಧಿಸಿ"

  **ಅಂದರೆ ಅವರಿಗೆ ದೇವರ ವಾಕ್ಯಗಳನ್ನು ಭೋದಿಸಿ, ಅದರಿಂದ ಅವರು ಬೆಳವಣಿಗೆ ಹೊಂದಿ, ಬೇರೆ ಜನರನ್ನು ಜಯಿಸಲು ಸಹಕಾರಿಯಾಗಿದೆ.**
- ✦ 20 - "ಆತ ಯಾವಾಗಲೂ ನಮ್ಮೊಂದಿಗಿರುತ್ತಾನೆ ಎಂಬ ವಾಗ್ದಾನ ಮಾಡಿದ್ದಾನೆ."



ಆತ್ಮಿಕ
ಸಾಮಾಜಿಕ
ಆರ್ಥಿಕ
ಲೈಂಗಿಕ
ಸ್ನೇಹಿತರು
ಮಾನಸಿಕ
ಭೌತಿಕ(ಶಾರೀರಿಕ)
ಸಹಭಾಗಿತ್ವ




# ದೈವಿಕ ಮುಖ್ಯಸ್ಥನ
# ಸತ್ಯವೇದದ ಗುಣಲಕ್ಷಣಗಳು

| | | |
|---|---|---|
| 1. | **ಸೇವಕನ ಮನೋಭಾವವಿರಬೇಕು** | **ಮಾರ್ಕ 10:42-45** |
| 2. | **ಪವಿತ್ರಾತ್ಮಭರಿತನಾಗಿರಬೇಕು** | **ಎಫೆಸ 5:18, ಅ.ಕೃ 4:31,**<br>**ಯೋಹಾ 7:38-39** |
| 3. | **ನಂಬಿಕಸ್ತನಾಗಿರಬೇಕು** | **ಮತ್ತಾಯ 25:21** |
| 4. | **ಸರಿಯಾದ ಆಧ್ಯತೆ** | **ಮತ್ತಾಯ 6:33** |
| 5. | **ದೇವರಿಗೆ ತೆರೆದುಕೊಳ್ಳಬೇಕು** | **ರೋಮಾ 12:1** |
| 6. | **ಪರಿಶುದ್ಧವಾಗಿರಬೇಕು** | **1 ತಿಮೋಥೆ 4:12** |
| 7. | **ಪ್ರಾರ್ಥಿಸುವವರಾಗಿರಬೇಕು** | **ಕೊಲೊ 1:9-10, ಎಫೆಸ 6:18** |

| | |
|---|---|
| 8. ಮಾದರಿಯಾಗಿರಬೇಕು | 1 ತಿಮೋಥೆ 4:12, ಫಿಲಿಪ್ಪಿ 4:9 |
| 9. ಕರುಣೆಯಿರಬೇಕು | 1 ಪೇತ್ರ 5:5-6 |
| 10. ಜನರನ್ನು ಕ್ರಿಸ್ತನೆಡೆಗೆ ತರಬೇಕು | ಅ.ಕೃ. 1:8, ಯೋಹಾನ 1:42 |
| 11. ವಿಧೇಯತೆ | ಮತ್ತಾ 28:18-20 |
| 12. ಆತ್ಮೀಕ ಹೆಚ್ಚಳತೆ | 2 ತಿಮೋತೆ 2:2 |
| 13. ದೇವರ ವಾಕ್ಯವನ್ನು ಸರಿಯಾಗಿ ಉಪದೇಶಿಸಬೇಕು | 2 ತಿಮೋ 2:15, 2 ತಿಮೋ 4:1-5. |
| 14. ಕಷ್ಟ ಮತ್ತು ಶೋಧನೆಗಳನ್ನು ಸಹಿಸಿಕೊಳ್ಳಬೇಕು | 2 ತಿಮೋಥೆ 2:3-4. |
| 15. ಆತ್ಮೀಕ ಹೋರಾಟದಲ್ಲಿ ಬಾಗಿಯಾಗಿರಬೇಕು | 1 ಪೇತ್ರ 5:8, ಎಫೆ 6:10-12. |
| 16. ಯೇಸುವಿನ ಸಾರೂಪ್ಯವನ್ನು ಪ್ರತಿನಿಧಿಸಬೇಕು | ರೋಮಾ 8:29 |